ಇವರು ಎಷ್ಟರಮಟ್ಟಿಗೆ ದೈವಭಕ್ತರಾಗಿದ್ದರು ಎಂದರೆ, ಆಡಳಿತದಲ್ಲಿ ದಕ್ಷರು ಮಾತ್ರವಲ್ಲ, ಬಿರಿಯ ಮೇಧಾವಿಗಳು ಮಾತ್ರವಲ್ಲ, ಇವರು ದೇವರ ಸನ್ನಿಧಿಗೆ ಹೋಗುವುದನ್ನು ಕೂಡ ತಿಳಿದಿದ್ದಂಥ ಮಹಾವ್ಯಕ್ತಿ. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇವರು ಸಾಯುವುದಕ್ಕೆ ಮುಂಚೆ ಸ್ಮಶಾನಕ್ಕೆ ಹೋಗಿದ್ದು ಅಲ್ಲಿಯ ಕೆಲಸಗಾರರಿಗೆ ತಾವೇ ಹಣವನ್ನು ಕೊಟ್ಟಿದ್ದಾರೆ. ಕೆಲವು ಕೆಲಸಗಳನ್ನು ಮಾಡಿಸಲು ಹೇಳಿ ಹಣಕೊಟ್ಟು ಬಂದರು. ಇಷ್ಟೆಲ್ಲವನ್ನೂ ಮಾಡಿ ಬಂದು ಅನಂತರ ಅವರು ಪ್ರಾಣವಾಯುವನ್ನು ನೀಗಿದ್ದು ಅವರು ಎಷ್ಟರಮಟ್ಟಿನ ದೈವಭಕ್ತರು, ಅವರಿಗೆ ಎಷ್ಟರಮಟ್ಟಿನ ಪರಿಜ್ಞಾನವಿತ್ತು ಎಂಬುದು ಗೊತ್ತಾಗುತ್ತದೆ. ಹುಟ್ಟು ಎಂಬ ನಾಣ್ಯಕ್ಕೆ ಯಾವ ಯಾವ ಮುದ್ರೆಯನ್ನು ಒತ್ತಬೇಕು, ಯಾವ ಯಾವ ಕಾಲಕ್ಕೆ ಯಾವ ರೀತಿಮಾಡಬೇಕು, ಎಂದು ತಿಳಿದುಕೊಂಡು, ಹುಟ್ಟಿನಿಂದ ಸಾಯುವವರೆಗೂ ಜೀವನವನ್ನು ಯಾವ ಯಾವ ಮಾರ್ಗದಲ್ಲಿ ಬೆಳೆಸಿಕೊಂಡು ಬಾಬೇಕೋ ಹಾಗೆ ಬೆಳಸಿಕೊಂಡು ಬಂದರು, ಹುಟ್ಟಿದ ದೇಶಕ್ಕೆ, ತಮ್ಮ ದೇಶದ ಜನತೆಗೆ ಎಷ್ಟರಮಟ್ಟಿನ ಕೆಲಸಕಾರ್ಯಗಳನ್ನು ಮಾಡಿ ಎಷ್ಟರಮಟ್ಟಿಗೆ ಸಹಾಯಮಾಡಿ ಅವರ ಪುರೋಭಿವೃದ್ಧಿಗೆ ಕಾರಣರಾದರು ಎಂಬುದನ್ನು ನೋಡಿದರೆ ಅವರು ಮಾಡಿದ ಕಾರ್ಯ ಮತ್ತು ಅವರು ಜನಗಳ ಕಷ್ಟವನ್ನು ಕಂಡು ಎಷ್ಟು ತಲ್ಲಣಿಸುತ್ತಿದ್ದರೆಂಬುದು ತಿಳಿಯುತ್ತದೆ. ಅವರಿಗೆ ತಾವು ಸಾಯುವ ವಿಷಯವೂ ಗೊತ್ತಿತ್ತು ಎಂದು ಹೇಳಬಹುದು. ಸ್ಮೃತಿಗಳಲ್ಲಿ ಮತ್ತು ಪುರಾಣಗಳಲ್ಲಿ ಋಷಿಗಳಿಗೆ, ತಪಸ್ಸುಮಾಡುವವರಿಗೆ ಮುಂತಾದ ವರಿಗೆಲ್ಲ ಇಂಥ ವಿಷಯಗಳು ತಿಳಿಯುತ್ತಿದ್ದುವು ಎಂದು ಓದಿದ್ದೇವೆ. ಆದರೆ ಇವೊತ್ತು ನಮ್ಮ ಕಣ್ಣೆದುರಿಗೆ ಸರ್ ಮಿರ್ಜಾ ಅವರ ಒಂದು ಪ್ರತ್ಯಕ್ಷ ಉದಾಹರಣೆ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಇಂತಹ ಒಬ್ಬ ಮೈಸೂರಿನ ನಿರ್ಮಾತೃ ಮೈಸೂರಿನ ಶಿಲ್ಪ ಮತ್ತು ಮೈಸೂರಿನ ಮಹಾಜನತೆಯ ಒಬ್ಬ ಸ್ನೇಹಿತರಾದವರು ಇವೊತ್ತಿನ ದಿವಸ ನಮ್ಮ ಕಣ್ಮರೆಯಾಗಿದ್ದಾರೆ. ಇಂತಹ ಮಹಾತ್ಮರ ವಿಷಯದಲ್ಲಿ ಯಾವುದಾದರೂ ಒಂದು ಸ್ಮಾರಕವನ್ನು ನಿರ್ಮಿಸಬೇಕಾದುದು ಅಗತ್ಯವಾಗಿದೆ. ನಿಜವಾಗಿಯೂ ಸರ್ಕಾರದವರು, ಸಾರ್ವಜನಿಕರು ಎಲ್ಲರೂ ಸಹಕರಿಸಿ ಸರ್ ಮಿರ್ಜಾರ ಅವರ ಹೆಸರು ಅಳಿಯದೆ ಚಿರಾಯುವಾಗಿ ಉಳಿಯುವಂತಹ ಸ್ಮಾರಕವನ್ನು ಏರ್ಪಡಿಸಬೇಕೆಂದು ನನ್ನ ಸ್ನೇಹಿತರಲ್ಲಿ ವಿನಂತಿ ಮಾಡಿಕೊಂಡು ಅಧ್ಯಕ್ಷರು ನನಗೆ ಇಷ್ಟು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳನ್ನು ಸಮರ್ಪಿಸಿ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ.

(Sri T. Siddalingaiah rose)

Mr. SPEAKER.—Before he starts offering remarks of tribute to the departed soul, I would like to say one or two words. I would request Hon'ble Members to make as short a speech as possible and secondly, they should not use this occasion for attacking some other members of this House or attacking the policy of the Government or the party in power. Why I am saying is this, that if we use this occasion for attacking each other or attacking the policy of the Government we would not be

(MR. SPEAKER)

paying tribute to the departed soul, rather we would be indulging in a sort of recrimination. Hence I urge that the speeches should be as short as possible and as few members as possible should take part in the debate. After all, on an occasion like this, the speeches do not so much matter as the feeling that we have. When the Leader of the House and the Leader of the Oposition spoke on this occasion, it only means that they have spoken on behalf of the party in power and on behalf of the opposition respectively. Even then I have allowed a few members to speak because they might be very anxious to take part in the condolence reference. Sri Siddalingaiah may now speak.

Sri T. SIDDALINGAIAH (Dodballapur).—There is an ancient adage to test the goodness or badness of a man's life. That man who is born crying when all the world is laughing and that man who dies laughing when all the rest of the world is crying, is a good man. Applying this finer test to Sir Mirza Ismail, his life is a great success. He left the world making everybody sad about his departure and his memory will be ever cherished in the hearts of old Mysore people. I have the good fortune and the honour of knowing him for the last thiry-two years personally. He was the very pink of courtesy and politeness. Never did he offend anybody in the course of personal talk or politics.

It is the good fortune of our old Mysore State to have a succession of eminent Dewans since the time of rendition. Mr. Rangachar established the administrative set-up in the Mysore State after it was taken over from the hands of the British Commissioner. Later Sir Seshadri Iyer introduced an element of science into it. He was the first man to bring in what we call Hydel project into India for the first time and made it a success. He was the person who started the great Sivasamudram Electricity project and also laid the first 90 mile long line of transmission from Shivasamudram to Kolar Gold Field. Later, we had an equally eminent man. Before coming to the next personality, we have also got to remember how we have set up a great memorial for the services of Sir K. Seshadri Iyer in the form of a public library with also a statue set up opposite to that public library near the premises of our Vidhan Soudha *i.e.* in Cubbon Park. The next person I want to mention among this eminent line of Dewans is Sir M. Visvesvaraya who is happily with us to-day, giving us a great benefaction and inspiration. Sir M. Visvesvaraya introduced the element of irrigation projects and industrialisation and more than all, the very name of planning was first publicly announced by him in his great publications. He wrote several books on Planning for India and also wrote another book called 'Industrialise or perish' and it is well known to everybody that Sir M. Visvesvaraya started so many industrial works in the whole of India. It was the State of Mysore that began to get a great reputation. It is in his days that Mahatma Gandhi called Mysore the Rama Rajya.

Sri J. B. MALLARADHYA.—It was in the year 1926, if I remember correctly, the great Mahatmaji said it was Ram Rajya. It was 1926 when he said that in Kumara Krupa during Sir Mirza's time.

Sri T. SIDDALINGAIYA.—I do not want to enter into controversy on this point, but I am very definite it was during Sir M. Visvesvaraya's time that Mahatma Gandhi called Mysore Ram Rajya. It is on record, if my memory is correct. Only in Sir Mirza's time it got the reputation of a model State. It does not matter. It is a small thing. We don't need to discuss that question further. Sir Mirza was a very great personality. He was in that line of eminent Dewans that Mysore has produced and it is these regimes of eminent Dewans that made Mahatma Gandhi and the great Dr. Annie Besant tell the British public, "See how native rulers and native Dewans are governing and administering the country. See how they are fit for Swaraj or self-government." They were saying that in the Hindu State of Mysore there was a Muslim Dewan and in the Muslim

State of Hyderabad there was a Hindu Dewan. In Hyderabad the Nizam and the Dewan belonged to different communities. These great people, the patriots who fought for freedom told the British that all the communal wrangles in India were due to the British themselves and that once they quit the country would be at peace without any communal clash. These three subjects were being pointed out by Mahatma Gandhi and Dr. Besant as symbols of hope and peace in the country.

Sir Mirza was a person who had shrewd far-seeing sense in regard to recruitment to services. By himself he was neither a scientist nor an industrialist; but he knew how to set a proper person for an appropriate job. Throughout his life he consulted eminent people and star ted big projects and whatever he has achieved it is due to his organising capacity. He put his heart into it. As Sri Mallaradhya put it, he was a reflection of his great master. Both together were able to carry out all the big projects and the achievements in the Mysore State.

Sir Mirza was Dewan in several States. He was able to represent several States at the Round Table Conference. All these Indian States had great confidence in him. When he was attaked by one community he said "I stand for Indian unity and I do not believe in the division of India on the basis of religion or community". Once when he was invited to deliver a Convocation speech he went straight in his own way attacking the propaganda for the division of the country. On the platform he was pelted with stones and with great courage he came out and sald "I stand for the unity of India; I am definitely against the division of the country on the basis of religion." He had the courage to tell that to the public in the face of great resentment of one community.

As the Speaker has already observed, that this occasion should be made use of in the spirit in which we ought to make use of it, we are here only to pay our tribute to that great soul that has departed. As I started saying he has left behind a great hallmark of his success. Our best tribute consists in following the example that he has set for us. As Sri Muckannappa put it, and it may be good in its own way to have any kind of big monument or statue but more than all that let him live in the hearts of us all who want to serve the country in the true spirit of service.

I say finally that good men never die. They will be amidst us to inspire us. They come into this physical life and after a certain time they disappear and they will be born again. I pray that he may come back to us to guide the destinies and deliberations of our country.

With these few words, I conclude my speech.

*ಶ್ರೀ ಎ. ಮಹಮದ್ ಸೇಟ್ (ಮೈಸೂರು ಸಿಟಿ ನಾರ್ತ್).—ಸ್ವಾಮಿ, ನನಗೆ ಹಿಂದೆ ಅನೇಕ ಮಹನೀಯರು ಸರ್ ಮಿರ್ಜಾ ಅವರ ನಿಧನದ ವಿಚಾರದಲ್ಲಿ ಬೇಕಾದಷ್ಟು ಹೇಳಿರುತ್ತಾರೆ. ಇವೊತ್ತು ಕಂಡೊಲೆನ್ಸ್ ಮೀಟಿಂಗಿನಲ್ಲಿ ಅದೇರೀತಿಯಲ್ಲಿ ಪ್ರತಿಯೊಬ್ಬರೂ ಅವರ ಗುಣಗಾನ ಮಾಡುವುದು ಅವರ ಜ್ಞಾಪಕಕ್ಕೋಸ್ಕರವಾಗಿ ಮತ್ತು ಅಂಥ ದೊಡ್ಡ ಮಹನೀಯರ ಹೆಜ್ಜೆಯಲ್ಲಿ ನಾವು ನಡೆಯಬೇಕು ಎಂಬ ಉದ್ದೇಶದಿಂದ. ಮಿರ್ಜಾ ಇಸ್ಮಾಯಿಲರನ್ನು 1910ನೆಯ ಇಸವಿಯಿಂದ, ಅವರು ಮೈಸೂರು ಪ್ಯಾರೆಸಿನಲ್ಲಿ ಅಸಿಸ್ಟೆಂಟ್ ಸೆಕ್ರೆಟೆರಿಯಾಗಿ ಬಂದಲಾಗಾಯಿತು ನಾನು ಬಲ್ಲೆ. ಅವರು ದೈವಾಧೀನರಾಗುವುದಕ್ಕೆ ಎರಡು-ಮೂರು ತಿಂಗಳುಗಳ ಮುಂಚೆ ಅವರ ಮನೆಗೆ ಹೋಗಿ ಅವರನ್ನು ಭೇಟಿಮಾಡಿದ್ದೆ. ಅಕಸ್ಮಾತ್ತಾಗಿ ಅವರು ಪ್ರಾಣಬಿಟ್ಟಕಾಲದಲ್ಲಿ ಹೈದರಾಬಾದಿನಲ್ಲಿದ್ದೆ. ಆ ವಾರ್ತೆಯನ್ನು ಕೇಳಿ ನನಗೆ ಬಹಳ ದುಃಖವಾಯಿತು. ಮಿರ್ಜಾ ಇಸ್ಮಾಯಿಲರು ನಮ್ಮ ಮಧ್ಯೇ ಇದ್ದುಬಿಟ್ಟು ನಮಗೆ ಬೇಕಾದಷ್ಟು ಬೋಧನೆ ಮಾಡಿ, ನಮ್ಮ ಕರ್ತವ್ಯವೆಲ್ಲವನ್ನೂ ತೋರಿಸಿ ಹೋಗಿದ್ದಾರೆ. ಇಷ್ಟು ಮಾತ್ರ ಹೇಳುತ್ತೇನೆ: ಅಂಥ ಮಹನೀಯರು ನಮ್ಮ ದೇಶಕ್ಕೆ ಒಬ್ಬರೇ ಇದ್ದುದು. ಅಂಥ ಮಹನೀಯರು ಪುನಃ ಹುಟ್ಟುವುದು ಅಪರೂಪ, ಅಂಥವರು ಸಿಕ್ಕುವುದಿಲ್ಲ. ಭಗವಂತ ಕುರಾನಿನಲ್ಲಿ ಹೇಳಿದ್ದಾನೆ: "ಆಕಾಶ, ಭೂಮಿ, ಚಂದ್ರ, ಸೂರ್ಯ—ಪ್ರತಿಯೊಬ್ಬರೂ ನಾಶವಾಗತಕ್ಕುದು. ಒಬ್ಬರು ಮುಂದೆ ಕಾಲವಾದರೆ, ನಾಳೆಯ ದಿವಸ ನಾವೂ ಅವರ ಹಿಂದೆ ಹೋಗಬೇಕು. ಇನ್ನೊಂದುಕಡೆ, ಯಾವ ಕ್ಷಣದಲ್ಲಿ ಏನಾಗುತ್ತದೆ ಎನ್ನುವುದನ್ನು ಯಾರೂ ನೋಳುವುದಕ್ಕಾಗುವುದಿಲ್ಲ".

ಮಿರ್ಜಾರವರು ಅಧಿಕಾರದಲ್ಲಿದ್ದಾಗ್ಗೆ ಪ್ರತಿಯೊಂದು ಇನ್‌ಸೆಕ್ಷನ್ನೂ ಡೀಟೇಲ್ ಆಗಿ ಮೈನ್ಯೂಟ್ ಆಗಿ ನಡೆಸುತ್ತಿದ್ದರು. ಅವರು ದಿವಾನರಾಗಿದ್ದಾಗ, ಚಿಲ್ಲರೆ ಚಿಲ್ಲರೆ ಕೆಲಸಗಳಲ್ಲಿಯೂ ನೋಟ್ಸ್ ತೆಗೆದು ಕೊಂಡು, ನೆಕ್ಸಟ್ ಇನ್‌ಸೆಕ್ಷನ್‌ಗೆ ಬರುವುದಕ್ಕೆ ಮುಂಚೆ ಹಿಂದೆ ನೋಟ್ಸಿನಲ್ಲಿ ನಮೂದಾದ ಕೆಲಸಗಳು ಆಗಿವೆಯೇ ಇಲ್ಲವೇ ಎಂದು ವಿಚಾರಿಸುತ್ತಿದ್ದರು. ಅವರ ಡಿಸಿಪ್ಲೀನ್, ಎಫಿಷಿಯನ್ಸಿ, ಪ್ರೀತಿ ವಾತ್ಸಲ್ಯ ಇವುಗಳ ವಿಚಾರವಾಗಿ ಎಲ್ಲರೂ ಹೇಳಿ

(ಶ್ರೀ ಎ. ಮಹಮದ್‌ಸೇಠ್)

ದ್ದಾರೆ. ನಾನು ಜಾಸ್ತಿ ಹೇಳುವುದಿಲ್ಲ. ನನ್ನ ಮಿತ್ರರಾದ ಶ್ರೀ ಮಲ್ಲಾರಾಧ್ಯರು ಅವರ ಎಫಿಸಿಯನ್ಸಿ, ಲೀಡರ್‌ಷಿಪ್ ಮುಂತಾದ ವಿಚಾರ ಗಳನ್ನು ಕುರಿತು ಅವರು ಗುಣಗಾನಮಾಡಿದ್ದಾರೆ. ಅವರ ಆತ್ಮಕ್ಕೆ ಶಾಂತಿಕೊಡಲಿ ಎಂದು ನಾನು ಭಗವಂತನನ್ನು ಪ್ರಾರ್ಥನೆಮಾಡುತ್ತೇನೆ.

ಶ್ರೀಮತಿ ನಾಗರತ್ನಮ್ಮ (ಗಾಂಧೀನಗರ).—ಮಾನ್ಯ ಸಭಾಪತಿಗಳೆ, ಮೈಸೂರು ನಾಡಿನ ಮಾನ್ಯ ಸುಪುತ್ರರಲ್ಲಿ ಒಬ್ಬರಾದ ಸರ್ ಮಿರ್ಜಾ ಅವರು ನಮ್ಮ ನಾಡಿನಿಂದ ಕಣ್‌ಮರೆಯಾದುದರಿಂದ, ನಾಡಿಗೆ ದೊಡ್ಡ ನಷ್ಟವಾಗಿದೆ. 1938ರಲ್ಲಿ ಜವಾಬ್ದಾರಿ ಸರ್ಕಾರದ ಹೋರಾಟ ಪ್ರಾರಂಭವಾದಾಗಿನಿಂದ, ಸರ್ ಮಿರ್ಜಾ ಅವರ ವಿಷಯವನ್ನು ಕೇಳಿದ್ದೇನೆ. ಅವರಲ್ಲಿದ್ದ ದೇಶಪ್ರೇಮ ಮತ್ತು ರಾಜಭಕ್ತಿ ವಿಷಯ ಗಳು ಎಲ್ಲರಿಗೂ ಮೆಚ್ಚುಗೆಯಾಗಿವೆ.

"ನಾನಾ ಚಮತ್ಕಾರವಂ ಅರಿಯಲ್ ಬಲ್ಲೊಡೆ ಮಂತ್ರಿಯಾಗು" ಎಂಬಂತೆ ಸಚಿವ ಪದವಿಗೆ ಬೇಕಾದ ಎಲ್ಲಾ ದಕ್ಷತೆಯೂ, ಗುಣಗಳೂ ಅವರಲ್ಲಿದ್ದುವು. ನಾಡಿನ ವರ್ತಮಾನ ಮತ್ತು ಭವಿಷ್ಯದ ಏಳಿಗೆಗೆ ದುಡಿದವರಲ್ಲಿ ಪ್ರಥಮ ಸ್ಥಾನವನ್ನುಗಳಿಸಿದ್ದಾರೆ. ಮೈಸೂರು ದೇಶದ ಉನ್ನತಿ, ಅಭ್ಯುದಯ ಮತ್ತು ಶಿಲ್ಪಗಳಲ್ಲಿ, ಸರ್ ಮಿರ್ಜಾ ಅವರಿಗೆ ಪ್ರಥಮಸ್ಥಾನ ವಿದೆ. ಶ್ರೀಮಂತರನ್ನು ಪ್ರೋತ್ಸಾಹಿಸಿ, ಧರ್ಮ ಕಾರ್ಯಗಳನ್ನು ಮಾಡಿಸುವುದರಲ್ಲಿ ಸರ್ ಮಿರ್ಜಾ ಅವರು ಸಿದ್ಧಹಸ್ತರಾಗಿದ್ದರು. ಅವರ ಈ ಗುಣ ಗಳು, ಇಂದೂ ಮತ್ತು ಎಂದೆಂದಿಗೂ ಚಿರಸ್ಥಾಯಿ ಯಾಗಿವೆ. ಹಳೆಯ ಮೈಸೂರಿನ ಸೌಂದರ್ಯ ನಿರ್ಮಾಣಕಾರ್ಯದಲ್ಲಿ ಮಿರ್ಜಾ ಅವರು ನಲ್ಲಿಸಿರುವ ಸೇವೆ ಯಾವಾಗಲೂ ಚಿರಸ್ಥಾಯಿಯಾಗಿದೆ. ದೇಶೋ ನ್ನತಿಕಾರ್ಯದ ನಣ್ಣಸಣ್ಣ ವಿಚಾರಗಳಲ್ಲಿ ಸಹ ಅವರ ಸೂಕ್ಷ್ಮದೃಷ್ಟಿ ದೂರವಾಗುತ್ತಿರಲಿಲ್ಲ.

2-30 P.M.

ಅವರ ರೀತಿನೀತಿಗಳು ಈಗ ಮಂತ್ರಿಗಳಾಗಿರುವವರಿಗೆ ಮತ್ತು ಮುಂದೆ ಮಂತ್ರಿಗಳಾಗುವವರಿಗೆ ಮೇಲ್ಪಂಕ್ತಿ ಆಗಲೆಂದು ನಾನು ಹಾರೈಸುತ್ತೇನೆ. ಕಾಂಗ್ರೆಸ್ಸಿನ ವರಾದ ನಮಗೂ ಸಹ ರಾಜಕೀಯ ಭಿನ್ನತೆ ಗಳನ್ನು ಬಿಟ್ಟು ಉಳಿದ ಎಲ್ಲಾ ವಿಚಾರಗಳಲ್ಲಿಯೂ ಅವರ ಗುಣಗಳು ಒಪ್ಪಿಕೊಳ್ಳುವಂತೆ ಇದ್ದುವು. ದೇಶಪಾಲನೆಗೆ ಬೇಕಾದ ಘನತೆ, ಮೇಧಾವಿತನ, ದೂರದೃಷ್ಟಿ, ಕಾರ್ಯನಿಷ್ಠೆ, ದಕ್ಷತೆ ಮುಂತಾದ ಎಲ್ಲಾ ಸದ್ಗುಣಗಳೂ ಅವರಲ್ಲಿ ಇದ್ದುವು. ಇಂಥ ವ್ಯಕ್ತಿ ಗಳು ನಮ್ಮಿಂದ ಅಗಲಿ ಕಣ್ಮರೆಯಾದುದು ತುಂಬಲಾ ರದ ನಷ್ಟವಾಗಿದೆ. ಅವರ ಸದ್ಗುಣಗಳನ್ನು ಅನುಸರಿಸಿಕೊಂಡು ಬರುವುದೇ ನಾವು ಅವರಿಗೆ ಸಲ್ಲಿಸುವ ಕೃತಜ್ಞತೆಯಾಗಿದೆ. ಹಾಗೆ ಮಾಡಿದರೆ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದಂತಾಗುತ್ತದೆ. ಕೊನೆಗೆ ನನ್ನ ಪ್ರಾರ್ಥನೆ ಇಷ್ಟೆ:

ಮೈಸೂರ ನಾಡಿನ ಮಾನ್ಯ ಸುಪುತ್ರನು
ಅಗಲದನೆಮ್ಮನು ಇಹದಿಂದ।
ಸ್ಥಿರವಲ್ಲವು ಪ್ರಪಂಚವಿದೆಂಬುದರ।
ತತ್ತ್ವವ ಬೋಧಿಸಿ ಮುದದಿಂದ।
ಪುಣ್ಯ ಫಲವನು ಒಯ್ದಿಹನು
ಕೀರ್ತಿಯನಿಲ್ಲಿಯೆ ಬಿಟ್ಟಿಹನು
ನಾಡಿನ ಜನರಿಗೆ ಜೀವನ ಮರ್ಮವ
ತೋರಿಸಿ ಪೋದನು ಇಲ್ಲಿಂದ
ಕಣ್ಮರೆಯಾದನು ನಮ್ಮಿಂದ॥
ವಿಹಿತವಿದೆನಿಸಿದ ಮಾರ್ಗದಿ
ಬಹುಜನ ಹಿತರಾಗಿ ಬಾಳ್ದ ಮಿರ್ಜಾ
ಇಸ್ಮಾಯಿಲ್।
ಮಹದಾದರ್ಶದ ಆತ್ಮಕೆ।
ಮಹಿಮಾನ್ವಿತ ಪೈಗಂಬರ ಶಾಂತಿ ನೀಡಲಿ
ನಿರುತಂ॥

ಶ್ರೀ ಜಿ. ಎಸ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೇ, ನನ್ನ ಮಾನ್ಯ ಮಿತ್ರರೆಲ್ಲರೂ ಎಲ್ಲಾ ವಿಚಾ ರಗಳನ್ನೂ ಪೂರ್ಣವಾಗಿ ವಿವರಿಸಿದ್ದಾರೆ. ನಾನು ಹೆಚ್ಚಿಗೆ ಹೊಗಳುವವನಲ್ಲ. ಇರತಕ್ಕ ಎರಡು ಮೂರು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸು ತ್ತೇನೆ. ಸರ್ ಮಿರ್ಜಾ ಇಸ್ಮಾಯಿಲ್ ಅವರು ಅನ್ಯ ಮತವನ್ನು ಎಂದೂ ದ್ವೇಷಮಾಡಿದವರಲ್ಲ. ಜಾತಿ ಮತ ದ್ವೇಷ ಅವರಲ್ಲಿರಲಿಲ್ಲ. ಶ್ರೀಮತಿ ನಾಗ ರತ್ನಮ್ಮ ಅವರು ಹೇಳಿದ ಹಾಗೆ ದೀನ ದಲಿತರಿಗೆ ದೈವ ರೂಪವಾಗಿದ್ದರು. ಒಂದು ಉದಾಹರಣೆಯನ್ನು ಹೇಳುತ್ತೇನೆ. ನಾನು ಅಸಿಸ್ಟೆಂಟ್ ಕಮೀಷನರ್ ಆಗಿದ್ದಾಗ್ಗೆ ಒಬ್ಬ ಮುಸ್ಲಿಂ ಅಮಲ್ದಾರರು ಇದ್ದರು. ಒಂದು ಸಾರಿ ಅವರು ಮತ್ತು ನಾನು ಒಂದು ದೇವ ಸ್ಥಾನಕ್ಕೆ ಹೋಗಿದ್ದೆವು. ಆಗ ಅವರು ತೀರ್ಥ ಪ್ರಸಾದ ತೆಗೆದುಕೊಳ್ಳುವುದು ನಮ್ಮ ಮತ ಧರ್ಮಕ್ಕೆ ವಿರೋಧ ಎಂದು ಹೇಳಿದರು; ಆದರೆ ನಾನು ತೆಗೆದುಕೊಂಡೆ. ಅದೇ ತಾಲ್ಲೂಕಿಗೆ ಸರ್ ಮಿರ್ಜಾ ಇಸ್ಮಾಯಿಲ್ ಅವರು ಒಂದು ಸಾರಿ ಟೂರ್ ಹಾಕಿಕೊಂಡು ಬಂದರು. ಆಗ ಅದೇ ದೇವಸ್ಥಾನಕ್ಕೆ ಪುನಃ ನಾವೆಲ್ಲರೂ ಹೋದೆವು. ಆಗ ನಾನು "ತೀರ್ಥ ಪ್ರಸಾದಕೊಟ್ಟರೆ ತೆಗೆದುಕೊಳ್ಳುತ್ತೀರಾ? ಒಂದು ವೇಳೆ ತಾವು ತೆಗೆದು ಕೊಳ್ಳದಿದ್ದರೆ ಅರ್ಚಕನಿಗೆ ಅವಮಾನವಾಗುತ್ತದೆ, ಹಿಂದೆ ಇದ್ದ ಅಮಲ್ದಾರರು ತೀರ್ಥಪ್ರಸಾದವನ್ನು ತೆಗೆದುಕೊಳ್ಳುವುದು ತಮ್ಮ ಮತಧರ್ಮಕ್ಕೆ ವಿರೋಧ ಎಂದು ಹೇಳಿದ್ದರು, ಅದಕ್ಕೊಸ್ಕರ ಈಗ ತಮ್ಮನ್ನು ಕೇಳುತ್ತಿದ್ದೇನೆ" ಎಂದು ಹೇಳಿದೆನು. ನಾನು ಆ ಮಾತನ್ನು ಅಮಲ್ದಾರರ ಮೇಲೆ ಚಾಡಿ ಹೇಳಬೇಕು ಎನ್ನುವ ಉದ್ದೇಶದಿಂದ ಹೇಳಲಿಲ್ಲ. ಅವರು ಅಚ್ಚ ಕಟ್ಟಾಗಿ ತೀರ್ಥ ಪ್ರಸಾದವನ್ನು ತೆಗೆದುಕೊಂಡರು. ಐದಾರು ದಿವಸಗಳಾದ ಮೇಲೆ ಅಲ್ಲಿಯ ಡೆಪ್ಯುಟಿ ಕಮೀಷನರಿಗೆ ಮೇಲೆ ಹೇಳಿದ ಅಮಲ್ದಾರರು ಐದು ದಿವಸಗಳೊಳಗಾಗಿ ಆ ದೇವಸ್ಥಾನಕ್ಕೆ ಹೋಗಿ ತೀರ್ಥ ಪ್ರಸಾದ ತೆಗೆದುಕೊಳ್ಳಬೇಕು, ಇಲ್ಲದಿದ್ದಲ್ಲಿ "remove him from service" ಎಂದು ಆರ್ಡರ್ ಬಂತು. ಇದು ರೆಕಾರ್ಡಿನಲ್ಲಿದೆ. ಯಾವಾಗಲೂ ದೊಡ್ಡ ಮನುಷ್ಯರಾದವರು ಜಾತಿ ಮತಭೇದವನ್ನು ಎಣಿಸು ವುದಿಲ್ಲ. ಅವರಲ್ಲಿ ಸತ್ಯ, ಧರ್ಮ, ನೀತಿ, ನಿಷ್ಠೆ ಇದ್ದುವು. ಮೈಸೂರು ದೇಶವನ್ನು ಯಾವುದರಿಂದ ಒಂದು ಇಂಚು ಮುಂದುವರಿಯುತ್ತದೋ ಅದಕ್ಕಾಗಿ ಪ್ರಾಣವನ್ನು ಕೊಡುವುದಕ್ಕೆ ಕೂಡ ಸಿದ್ಧರಾಗಿದ್ದರು. ಮಳವಳ್ಳಿ ತಾಲ್ಲೂಕಿನಲ್ಲಿ ತೆನೆ ಮೆದೆಗಳನ್ನು ದ್ವೇಷಾಸೂಯೆಗ ಳಿಂದ ಬೇಯಿಸುತ್ತಿದ್ದರು. ವರ್ಷಕ್ಕೆ ಸುಮಾರು ಇನ್ನೂರು ಮುನ್ನೂರು ಮೆದೆಗಳನ್ನು ಬೇಯಿಸುತ್ತಿ ದ್ದರು. ಆಗ ನಾನು ಬೇರೆ ತಾಲ್ಲೂಕಿನಲ್ಲಿ ಪೋಲೀಸ್ ಆಫೀಸರ್ ಆಗಿದ್ದೆ. ಆನ್ಪತ್ರೆಯಲ್ಲಿ ಇಂಜೆಕ್ಷೆಂಟ್ ಆಗಿದ್ದೆ. ಐ. ಜಿ. ಪಿ.ಯವರು ನನ್ನನ್ನು ಆ ತಾಲ್ಲೂಕಿಗೆ ಆ ದುರಾಡಳಿತವನ್ನು ತಪ್ಪಿಸಲು ಹಾಕಿದರು. ಏನು ಕಾರಣದಿಂದಲೋ ಐ. ಜಿ. ಪಿ. ಯವರಿಗೆ ದಿವಾನರ ಆರ್ಡರ್ ಬಂದು ನನ್ನನ್ನು ಕಳುಹಿಸಿದರು. ದೈವ ವಶಾತ್ ದೇವರು ಕೊಟ್ಟ ಶಕ್ತಿಯಿಂದಲೋ ಏನೋ

ನಾನು ಅಲ್ಲಿಗೆ ಹೋದ ಕೆಲವು ಕಾಲದ ಮೇಲೆ ಮೆಜೆ ಬೇಯಿಸುವುದು ಎಲ್ಲವೂ ನಿಂತುಹೋಯಿತು. ಎಲ್ಲ ವನ್ನೂ ನಿಲ್ಲಿಸಿದೆನು. ಮಿರ್ಜಾ ಸಾಹೇಬರವರು ಅನಿರೀಕ್ಷಿತವಾಗಿ ಅಲ್ಲಿಗೆ ಭೇಟಿ ಕೊಟ್ಟು ಅದನ್ನು ಹೇಗೆ ನಿಲ್ಲಿಸಿದೆ ಎಂದು ಕೇಳಿದರು. ಅದನ್ನು ಹೇಳುವುದಕ್ಕಾ ಗುವುದಿಲ್ಲ; ಅದನ್ನು ಹೇಳಬೇಕಾದರೆ ಐ.ಜಿ.ಪಿ.ಯವರ ಪರ್ಮಿಷನ್ ಬೇಕು ಎಂದು ಹೇಳಿದೆ. ಹಾಗೆ ಹೇಳಿದೆ ನೆಂದು ಅವರು ನನ್ನ ಮೇಲೆ ಕೋಪಿಸಿಕೊಳ್ಳಲಿಲ್ಲ. 15-20 ದಿವಸಗಳಾದ ಮೇಲೆ " You have been awarded His Highness the Maharaja's police medal with an allowance of Rs. 8 per month until death" ಎಂದು ನನಗೆ ಆರ್ಡರ್ ಬಂತು. ಆಗಿನ ಕಾಲದಲ್ಲಿ ಯಾರು ಕೆಲಸ ಮಾಡುತ್ತಾರೋ ಅಂತಹವರಿಗೆ ಪ್ರೋತ್ಸಾಹ ಕೊಡು ತ್ತಿದ್ದರು. ಯಾರು ಅಯೋಗ್ಯತನದಲ್ಲಿ ಹೋಗುತ್ತಿ ದ್ದರೋ ಅಂಥವರನ್ನು ಬಲಹಾಕುತ್ತಿದ್ದರು. ಸರ್ ಮಿರ್ಜಾ ಇಸ್ಮಾಯಿಲ್ ಅವರು ಪ್ರವಾಸ ಹೋದ ಕಾಲದಲ್ಲಿ ಹಿಂದೆ ಏನೇನು ಇನ್‌ಸ್ಪೆಕ್ಷನ್ ಕೊಟ್ಟಿದ್ದರು, ಏನೇನು ಕೆಲಸ ನಡೆದಿದೆ; ನಡೆಯದೆ ಇರಲು ಕಾರಣ ವೇನು, ಅದು ನಡೆಯಬೇಕಾದರೆ ಏನು ಮಾಡಬೇಕು, ಎಂಬುದನೆಲ್ಲಾ ವಿಚಾರಮಾಡಿ ಬರುತ್ತಿದ್ದರು. ಸರ್ ಮಿರ್ಜಾ ಇಸ್ಮಾಯಿಲ್ ಅವರು ಟೂರ್ ಹೊರಟರೆ ಎಲ್ಲಾ ಡಿಪಾರ್ಟ್‌ಮೆಂಟಿನವರಿಗೂ ಭಯ ಇರುತ್ತಿತ್ತು. ಇಂಥ ಕೆಲಸ ಮಾಡಬೇಕು. ಇಲ್ಲದಿದ್ದರೆ ಸರ್ವಿಸ್‌ನಿಂದ ತೆಗೆದುಹಾಕುತ್ತಾರೆ ಎನ್ನುವ ಭಯ ಇರುತ್ತಿತ್ತು.

ಇನ್ನೊಂದು ವಿಷಯ. ತಿಂಗಳಿಗೆ ಒಂದು ಸಾರಿ ಸ್ಟೇಟ್ ಆಫೀಸರ್ಸ್ ಎಲ್ಲರೂ ಅವರ ಬಂಗಲೆಗೆ ಹೋಗ ಬೇಕು. ಅವರನ್ನು ಕೂರಿಸಿಕೊಂಡು ಕೋ-ಆರ್ಡಿ ನೇಷನ್, ಕೋ-ಆಪರೇಷನ್ ಹೇಗಿದೆ ಎಂದು ನೋಡಿ, ಕೋ-ಆಪರೇಷನ್ ಇಲ್ಲದಿದ್ದರೆ ಸರಿಯಾದ ಬಂದೋ ಬಸ್ತು ಮಾಡಿ ಇನ್‌ಸ್ಪೆಕ್ಷನ್ ಕೊಡುತ್ತಿದ್ದರು. ಪ್ರತಿ ಯೊಂದು ಡಿಪಾರ್ಟ್‌ಮೆಂಟಿನಲ್ಲೂ ಪ್ರತಿಯೊಬ್ಬರೂ ಕಾಲಕ್ಕೆ ತಕ್ಕಂತೆ ಕೆಲಸವನ್ನು ಮಾಡಲೇಬೇಕಾಗಿತ್ತು. ಈಗ ಇವ್ವಪ್ಪ ಜೀಪ್ಸ್ ಇರಲಿಲ್ಲ, ವೆಹಿಕಲ್ಸ್ ಇರಲಿಲ್ಲ ದೇಶದ ಉತ್ಪತ್ತಿ ಮೂರು ಕೋಟಿ ರೂಪಾಯಿಗಳಿ ಗಿಂತಲೂ ಕಡಮೆಯಾಗಿತ್ತು. ಆಗಿನ ಕಾಲದಲ್ಲಿ ಶ್ರೀಮಾನ್ ಮರ್ಲಾರಾಧ್ಯರು ಹೇಳಿದ ಹಾಗೆ love and affection ನಿಂದ ನಡೆಯುತ್ತಿತ್ತು. ಒಟ್ಟಿನಲ್ಲಿ ಸರ್ ಮಿರ್ಜಾ ಅವರು ಮೈಸೂರು ದೇಶವನ್ನು ಬಹಳ ಮೈಭವದಿಂದ ಆಳಿದಂಥ ಮಹನೀಯರು. ಇಂಥ ಮಹನೀಯರು ಸಾಯುವುದಿಲ್ಲ. ಇವರನ್ನು ಕಂಡರೆ ದೇವರಿಗೆ ಪ್ರೀತಿಯಾಗುತ್ತದೆ. ಇನ್ನೂ ಹತ್ತಾರು ವರ್ಷ ಬದುಕಬಹುದಾಗಿತ್ತು. ಒಳ್ಳೆಯ ಜನಗಳು ಈಗಿನ ಕೆಟ್ಟ ಕಾಲ ಮತ್ತು ಕೆಟ್ಟ ದೇಶದಲ್ಲಿ ಇರಬಾರದು ಎಂದು ದೇವರು ಅವರನ್ನು ಕರೆಯಿಸಿಕೊಂಡಿದ್ದಾನೆ. ಯಾವಾಗಲೂ ಮಹನೀಯರು ನಿಜವಾಗಿಯೂ ಮಹ ನೀಯರೇ. ಅವರು ಸಾಯುವುದಕ್ಕೆ ಸ್ವಲ್ಪ ದಿವಸಗಳ ಹಿಂದೆ ಅವರನ್ನು ನೋಡೋಣ ಎಂದು ನಾನು ಹೈಗ್ರೌಂಡಿಗೆ ಹೋದೆ. ಆಗ ಅವರು ಮನೆಯ ಕಾಂಪೌಂಡಿನಲ್ಲಿ ತಿರುಗಾಡುತ್ತಿದ್ದರು. ನನ್ನನ್ನು ನೋಡಿ ನನ್ನ ಸಂಗಡ ಹತ್ತಾರು ನಿಮಿಷಗಳು ಮಾತ ನಾಡಿದರು. ಆಗ ನಾನು ವಿಧಾನ ಸೌಧವನ್ನು ಶ್ರೀ ಹನುಮಂತಯ್ಯನವರು ಕಟ್ಟಿಸಿದುದಕ್ಕಾಗಿ ಜನಗಳು ಏನೇನೋ ಮಾತನಾಡುತ್ತಿದ್ದಾರೆ, ನಿಮ್ಮ ಒಪೀನಿಯನ್ ಏನು ಎಂದು ಕೇಳಿದೆ. ಆಗ ಅವರು "Mr. Hanumanthaiya excelled me." ಎಂದ ಹೇಳಿದರು. ಅದರಲ್ಲಿ ಅರ್ಥ ಇಷ್ಟೇ ಇರುವುದು. ಯಾವಾಗಲೂ ದೊಡ್ಡವರು ದ್ವೇಷಾಸೂಯೆ ಮಾಡು ವುದಿಲ್ಲ. ಅದರಂತೆ ಅವರಲ್ಲಿ ದ್ವೇಷಾಸೂಯೆ ಮಾಡ ತಕ್ಕದ್ದು ಇರಲಿಲ್ಲ. ದೇವರು ನಿಜವಾಗಿಯೂ ಬಹಳ ಬುದ್ಧಿ ಇರತಕ್ಕ ಮಹಾನುಭಾವ ಎಂದು ತಿಳಿದೆ. (ನಗು), ನಗಬೇಕು ಏಕೆ? ತಿಳಿವಳಿಕೆ ಇಲ್ಲದವರು ನಗುತ್ತಾರೆ.

Sri B. S. SHANKARAPPA (Hosadurga).—Is it right on the part of the member to make such a remark about other members?

ಅಧ್ಯಕ್ಷರು.—ಇದು ಸ್ವಲ್ಪ ಗಂಭೀರವಾದ ಪ್ರಸಂಗ ಎನ್ನುವುದು ತಾವು ಒಪ್ಪಿಕೊಳ್ಳುವ ಮಾತು. ನಾವು ಸ್ವಲ್ಪ ಗಂಭೀರವಾಗಿ ಇದ್ದುಕೊಂಡು ಈ ಠರಾವನ್ನು ಪಾಸುಮಾಡೋಣ. ಎರಡನೆಯದು ಬಹಳ ಜನ ಮಾತನಾಡುತ್ತಾ ಹೋದರೆ ಇವೊತ್ತು ರಜಾ ಕೊಡ ಬೇಕೆಂಬುದು ಮಾತಾಡುವುದರಲ್ಲಿಯೇ ಮುಗಿದು ಹೋಗುತ್ತದೆ. ಆದ್ದರಿಂದ ಬೇಗ ಮುಗಿಸುವ ಪ್ರಯತ್ನವನ್ನು ಮಾಡಬೇಕು.

ಶ್ರೀ ಜಿ. ಎನ್. ಪುಟ್ಟಣ್ಣಿ.—ಸರ್ ಮಿರ್ಜಾ ಇಸ್ಮಾ ಯಿಲ್ ಸಾಹೇಬರರ ದರ್ಬಾರು ಹೇಗಿತ್ತು ಎಂದರೆ ದೀನದಲಿತರೆಲ್ಲರಿಗೂ ದೈವರೂಪದಂತಿದ್ದು ಯೋಗ್ಯರಿ ಗೆಲ್ಲರಿಗೂ ದೊಡ್ಡವರಾಗಿದ್ದುಕೊಂಡು ದೇಶವನ್ನು ಉದ್ಧಾರಮಾಡಬೇಕೆಂದು ಮಾಡಿದರು. ಮಹಾತ್ಮ ಗಾಂಧೀಜಿಯವರ ಸ್ವಾಭ್ಯಚ್ಯು ಇರುವ ಸ್ಥಳದಲ್ಲಿಯೇ ಅವರ ಮಹಾಭಕ್ತರೂ ಸತ್ಪುರುಷರೂ ಆದ ಇವರ ಸ್ವಾಭ್ಯಚ್ಯುವನ್ನು ಕಾಂಗ್ರೆಸ್ ಸರ್ಕಾರದವರೂ ಕೂಡಿಸಿ ಅವರು ದೇಶಕ್ಕೆ ಒಂದು ದೊಡ್ಡ ಸೇವೆಯನ್ನು ನಲ್ಲಿಸಿದ ವ್ಯಕ್ತಿ ಎಂದು ಮುಂದೆ ಬರತಕ್ಕವರಿಗೆ ತೋರಿಸಿಕೊಟ್ಟು ಅವರ ಆದರ್ಶವನ್ನು ಇತರರು ಅನುಸರಿಸುವಂತೆ ಮಾಡಬೇಕೆಂದು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಅಧ್ಯಕ್ಷರೇ, ಸಭಾ ನಾಯಕರು ಇಂದು ಸೂಚಿಸಿರತಕ್ಕ ಸಂತಾಪ ಸೂಚಕ ನಿರ್ಣಯವನ್ನು ಅನು ಮೋದಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ ಸರ್ ಮಿರ್ಜಾ ಇಸ್ಮಾಯಿಲ್ ಅವರು ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿ ಮಾಡಿದಂಥ ಸೇವೆ ಬಹಳ ಅಮೋಘವಾದುದು. ಬಹಳ ದೀರ್ಘಕಾಲ ದಿವಾನರಾಗಿದ್ದವರ ಪೈಕಿ ಇವರು ಎರಡನೆಯವರು, ಶ್ರೀ ಶೇಷಾದ್ರಿ ಐಯರ್ ಅವರು ಹದಿನೆಂಟು ವರ್ಷ ದಿವಾನರಾಗಿದ್ದರು. ಇವರು ಹದಿನೈದು ವರ್ಷ ದಿವಾನರಾಗಿದ್ದರು. ಸರ್ ಮಿರ್ಜಾ ಅವರು ಬಹಳ ದೀರ್ಘಕಾಲ ದಿವಾನರಾ ಗಿದ್ದು ಮೈಸೂರಿನ ನಾನಾ ವಿಧವಾದ ಪ್ರಗತಿಗೆ ಕಾರಣರಾಗಿದ್ದಾರೆ. ಆ ವಿಷಯವನ್ನು ಈಗಾಗಲೇ ನನ್ನ ಅನೇಕ ಮಾನ್ಯ ಮಿತ್ರರು ಪ್ರಸ್ತಾಪಮಾಡಿದ್ದಾರೆ. ಸರ್ ಎಂ. ವಿಶ್ವೇಶ್ವರಯ್ಯನವರು ಮತ್ತು ಅವರ ಹಿಂದೆ ಇದ್ದ ಶ್ರೀ ಶೇಷಾದ್ರಿ ಐಯ್ಯರ್ ಅವರು ಹಾಕಿ ದಂಥ ತಳಹದಿಯನ್ನು ಉಪಯೋಗಿಸಿಕೊಂಡು ಸರ್ ಮಿರ್ಜಾ ಇಸ್ಮಾಯಿಲ್ ಅವರು ಒಂದು ಭವ್ಯ ಭವನ ವನ್ನು ನಿರ್ಮಾಣಮಾಡಿ ಮೈಸೂರು ಮಾದರಿಸಂಸ್ಥಾನ ಎನ್ನುವುದಕ್ಕೆ ಕಾರಣರಾದರು. ಇದು ಉತ್ಪ್ರೇಕ್ಷೆಯ ಮಾತಲ್ಲ.

(ಶ್ರೀ ಎಚ್. ಕೆ. ವೀರಣ್ಣಗೌಡ)

ಅವರ ದಿವಾಕಿರಿಯಲ್ಲಿ ನಾನು ಅವರ ಆಡಳಿತದ ಕೆಲವು ನೀತಿಗಳನ್ನು ಬಹಳ ಕಟುವಾಗಿ ವಿರೋಧಿಸಿ ಟೀಕಿಸಿ ನಡದಿದ್ದೇನೆ. ಆ ಕಾಲದಲ್ಲಿ ದಿವಾನರುಗಳು ಅಂದರೆ ಮಹಾರಾಜರುಗಳ ಆಡಳಿತದಲ್ಲಿ ಸರ್ವಾಧಿಕಾರ ಮನೋಭಾವದಿಂದ ಆಡಳಿತವನ್ನು ನಡೆಸುತ್ತಿದ್ದರು. ಅಂತಹ ಭಾವನೆ ಸರ್ ಮಿರ್ಜಾ ಅವರು ಇಟ್ಟಿರಲಿಲ್ಲ. ಅವರು ಆಡಳಿತವನ್ನು ಸಮಯೋಚಿತವಾಗಿ ನಡೆಸಿಕೊಂಡು ಹೋಗುವುದರಲ್ಲಿ ಚತುರರಾಗಿದ್ದರು. ಅವರ ದೃಷ್ಟಿಯಲ್ಲಿದ್ದ ಮುಖ್ಯೋದ್ದೇಶ ಮೈಸೂರಿನ ಪ್ರಗತಿ. ಅವರ ದೃಷ್ಟಿಯಲ್ಲಿ ಏನಾದರೂ ಒಂದು ಕಾರ್ಯ ಮೈಸೂರಿನ ಪ್ರಗತಿಗೆ ವಿರೋಧವಾಗಿ ನಡೆಯುತ್ತಿದೆ ಎಂದು ತಿಳಿದರೆ ಅವರು ಅದನ್ನು ಸಹಿಸುತ್ತಿರಲಿಲ್ಲ. ವಿರೋಧಾಭಿಪ್ರಾಯ ನೂಚಿಸುವುದಕ್ಕೆ ಅಷ್ಟು ಸಾಲಭವಾಗಿ ಅವರು ಒಪ್ಪಿಕೊಳ್ಳುತ್ತಿರಲಿಲ್ಲ. ಆದ್ದರಿಂದ ಅವರ ಆಡಳಿತನೀತಿಯನ್ನು ಬಹಳ ಕಟುವಾಗಿ ಟೀಕಿಸುತ್ತಿದ್ದೆ. ಅವರ ಆಡಳಿತನೀತಿ ಬಹುಮಟ್ಟಿಗೆ ಮೈಯಕ್ತಿಕವಾಗಿತ್ತು. ಅಧಿಕಾರವರ್ಗದವರಲ್ಲಿ ಒಂದು ಮನೋಭಾವನೆ ಮೊದಲಿನಿಂದಲೂ ಬೆಳೆದುಬಂದಿದೆ. ಅದೇನೆಂದರೆ, ಅವರು ಮಾಡಿರತಕ್ಕ ಕೆಲಸಕಾರ್ಯಗಳಲ್ಲಿ ಯಾರೂ ಹೆಚ್ಚುಕಡಮೆ ಎಂದು ತೋರಿಸಿಕೊಡಲಕ್ಕಾಗುವುದಿಲ್ಲ. ಸರ್ ಮಿರ್ಜಾ ಅವರ ಹತ್ತಿರ ಯಾರು ಇರುತ್ತಿದ್ದರೋ ಅವರ ಮಾತಿಗೇ ಹೆಚ್ಚು ಬೆಲೆಕೊಡುತ್ತಿದ್ದುದು ಸ್ವಾಭಾವಿಕ. ಏನೇ ಆಗಲಿ ವಿರೋಧಾಭಿಪ್ರಾಯವನ್ನು ಸರ್ ಮಿರ್ಜಾ ಅವರು ಸಹಿಸುತ್ತಿರಲಿಲ್ಲ. ಶ್ರೀಮತಿ ನಾಗರತ್ನಮ್ಮ ಅವರು ಹೇಳಿದ ಹಾಗೆ ಅವರ ಆಡಳಿತ ನೀತಿಯಲ್ಲಿ ಚತುರತೆ ಬಹಳವಾಗಿತ್ತು. ಸಾಧ್ಯವಾದಷ್ಟು ಚತುರೋಪಾಯಗಳನ್ನು ಪಯೋಗಿಸಿ ವಿರೋಧಿಗಳನ್ನು ವಿಶ್ವಾಸಕ್ಕೆ ಪಾತ್ರರನ್ನಾಗಿ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದುದು ನನ್ನ ಅನುಭವದಲ್ಲಿದೆ. ಅಂತಹ ವಿರೋಧಿಗಳ ಪೈಕಿ ನಾನೂ ಒಬ್ಬ. ಕೈಗಾರಿಕೆಯ ವಿಚಾರದಲ್ಲಿ ಮೈಸೂರು, ಬೆಂಗಳೂರು ಪಟ್ಟಣಗಳೇ ಏಕೆ, ಇಡಿಯ ಮೈಸೂರು ಸಂಸ್ಥಾನವೇ ಅವರ ಆಡಳಿತದಲ್ಲಿ ಹೆಚ್ಚಿನ ಕೀರ್ತಿಯನ್ನು ಗಳಿಸಿದೆ. ಅವರೂ ಸಹ ಹೆಚ್ಚಿನ ಕೀರ್ತಿಯನ್ನು ಪಡೆದಿದ್ದಾರೆ. ಕೆಲವು ಸಂದರ್ಭಗಳಲ್ಲಿ ಹಣ ವ್ಯರ್ಥ ಖರ್ಚಾದರೂ ಇಡಿಯ ಮೈಸೂರು ಸಂಸ್ಥಾನದ ಸೌಂದರ್ಯದೃಷ್ಟಿಯಿಂದ ಅದನ್ನು ಅಷ್ಟಾಗಿ ಅವರು ಲಕ್ಷ್ಯ ಮಾಡುತ್ತಿರಲಿಲ್ಲ. ನಾನು ಮೈಸೂರಿನಲ್ಲಿ ವಿದ್ಯಾರ್ಥಿಯಾಗಿದ್ದ ಕಾಲಕ್ಕೆ ಎಂಟನೆಯ ಎಡ್ವರ್ಡ್ ಅವರು ಪ್ರಿನ್ಸ್ ಆಫ್ ವೇಲ್ಸ್ ಆಗಿ ಮೈಸೂರಿಗೆ ಬಂದಿದ್ದರು. ಅವರನ್ನು ನೋಡುವುದಕ್ಕೆ ನಾನಾಪ್ರದೇಶಗಳಿಂದ ಜನ ಕಿಕ್ಕಿರಿದು ಮೈಸೂರಿನಲ್ಲಿ ಸೇರಿದ್ದರು. ಆ ಕಾಲದಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರ ದರ್ಶನವನ್ನು ಪಡೆಯಲು ಕೃಷ್ಣರಾಜೇಂದ್ರ ಆಸ್ಪತ್ರೆಯ ಮುಂದೆ ಮಾರ್ಕೆಟ್ ಪಕ್ಕದವರೆಗೂ ಜನ ಕುಳಿತುಕೊಳ್ಳುವುದಕ್ಕೆ ಒಂದು ಗ್ಯಾಲರಿ ಕಟ್ಟಿಸಿದ್ದರು. ಆ ಗ್ಯಾಲರಿಯಿಂದ ಕೃಷ್ಣರಾಜೇಂದ್ರ ಆಸ್ಪತ್ರೆಯ ನೋಟ ಮುಚ್ಚಿಹೋಗುತ್ತಿತ್ತು. ಆಗ ಸರ್ ಮಿರ್ಜಾ ಅವರು ಮಹಾರಾಜರ ಪ್ರೈವೇಟ್ ಸೆಕ್ರೆಟರಿಯೋ ಅಥವಾ ಹಾಜೂರು ಸೆಕ್ರೆಟರಿಯೋ ಆಗಿದ್ದರು. ತಮಾಷೆ ನೋಡೋಣವೆಂದು ನಾನೂ ಅಲ್ಲಿಗೆ ಹೋಗಿದ್ದೆ. ಆ ಗ್ಯಾಲರಿಯನ್ನು ತೆಗೆಸಿಬಿಡಬೇಕೆಂದು ಸರ್ ಮಿರ್ಜಾ ಅವರು ಹೇಳಿದರು' ಕೂಡಲೆ ರಾತ್ರಿಯೆಲ್ಲಾ ಸಾವಿರಾರು ಜನ ಕೂಲಿಗಾರರನ್ನು ಸೇರಿಸಿ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಮುಂದಿದ್ದ ಗ್ಯಾಲರಿಯನ್ನು ಕೆತ್ತು ಈಗ ಮೆಡಿಕಲ್ ಕಾಲೇಜು ಮತ್ತು ಎಗ್ಸಿಬಿಷನ್ ಕಟ್ಟಡ ಇರುವ ಸ್ಥಳದಲ್ಲಿ ಬೆಳಗ್ಗೆ 8ಘಂಟೆಯ ಹೊತ್ತಿಗೆ ಪ್ರಿನ್ಸ್ ಆಫ್ ವೇಲ್ಸ್ ಅವರ ಮೆರವಣಿಗೆ ಬರುವುದರೊಳಗಾಗಿ ಮೆಟ್ಟಲು ಮೆಟ್ಟಲಂತಿರುವ ಒಂದು ಗ್ಯಾಲರಿ ಜನರು ಅವರ ದರ್ಶನವನ್ನು ಪಡೆಯುವುದಕ್ಕಾಗಿ ತಯಾರಾಯಿತು. ಇದಕ್ಕಾಗಿ ಸಾವಿರಾರು ರೂಪಾಯಿಗಳು ಖರ್ಚಾದುವು. ಆದರೂ ಅದನ್ನು ಲೆಕ್ಕಿಸದೆ ಸರ್ ಮಿರ್ಜಾ ಅವರು ಮೈಸೂರು ನಗರದಲ್ಲಿ ಅನೇಕ ಭವ್ಯ ಭವನಗಳು ಇವೆ ಎಂಬುದು ಪ್ರಿನ್ಸ್ ಆಫ್ ವೇಲ್ಸರ ದೃಷ್ಟಿಗೆ ಕಾಣಿಸಲಿ ಎಂದು ಆ ರೀತಿ ಮಾಡಿದರು. ಕೃಷ್ಣರಾಜಸಾಗರ ಕಟ್ಟಿಸುವುದಾಗಲಿ ಊರ್ಲೆಂದು ಬ್ಯಂದಾವನ ನಿರ್ಮಾಣ ಮಾಡುವುದಾಗಲಿ, ಯಾವುದನ್ನೂ ಅದು ಸಣ್ಣದು, ದೊಡ್ಡದು ಎಂದು ಭೇದ ಭಾವನೆ ಇಡದೆ ಪ್ರತಿಯೊಂದು ಕೆಲಸವೂ ಆಚ್ಚುಕಟ್ಟಾಗಿರಬೇಕು; ಅದು ಪ್ರೇಕ್ಷಕರಿಗಾಕರ್ಷಣೀಯವಾಗಿರಬೇಕೆಂದು ಮಾಡಿದರು. ಅವರು ಒಬ್ಬ ದೊಡ್ಡ ಸಂಘಟನೆಯ ಉತ್ಪಾದಕರುಎಂದು ಹೇಳಿದರೆ ಅದು ಉತ್ಪ್ರೇಕ್ಷೆಯ ಮಾತಲ್ಲ. ಅವರ ಆಡಳಿತ ನೀತಿ ವಿರೋಧಿಗಳಿಗೆ ಸ್ವಲ್ಪ ಕಟುವಾಗಿ ಕಂಡರೂ, ಅವರು ಮಾಡಿರುವ ದೇಶಾಭಿವೃದ್ಧಿಯ ಕೆಲಸಕಾರ್ಯಗಳು ಬಹಳ ದೊಡ್ಡದಾಗಿ ಕಾಣುತ್ತವೆ. ಎದುರಾಳಿಗಳನ್ನು ಬಹು ಬೇಗ ಅವರ ವಿಶ್ವಾಸಕ್ಕೆ ಪಾತ್ರರಾಗುವಂತೆ ಮಾಡುತ್ತಿದ್ದರು. ಆಗ ವೀರಣ್ಣಗೌಡ ಯಾರು ಎಂಬುದು ಅವರಿಗೆ ಗೊತ್ತಿರಲಿಲ್ಲ ನನ್ನ ಪರಿಚಯವನ್ನು ಯಾರೂ ಅವರಿಗೆ ಮಾಡಿಕೊಟ್ಟಿರಲಿಲ್ಲ. ನಾನು ಅವರಿಗೆ ಬಹಳ ವಿರೋಧಿಯಾಗಿದ್ದ ಕಾಲದಲ್ಲಿ ಅವರಿಗೆ ಸರ್ ಎಂಬ ಟೈಟಲ್ ಬಂತು. ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಆಗ ಅವರಿಗೊಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಅಲ್ಲಿಗೆ ನಾನೂ ಹೋಗಿದ್ದೆ. ಆ ದಿನ ಅವರಿಗೆ ಎದುರಾಗಿ ಸಿಕ್ಕದೆ ಬೇರೆದಾರಿಹಿಡಿದುಕೊಂಡು ಹೋಗುತ್ತಿದ್ದೆನಾದರೂ ಒಂದು ಸಾರಿ ನಾನಿದ್ದೆಡೆಗೆ ಅವರೇ ಬಂದು, ವೀರಣ್ಣಗೌಡರೇ ನಿಮ್ಮ ಪತ್ರಿಕೆ ಹೇಗಿದೆ? ಎಂದು ಕೇಳಿದರು. ಅವರ ಅಭಿಪ್ರಾಯದಲ್ಲಿ ನಾನು ಸ್ವಲ್ಪ ತಂಟೆಕೋರ ಯುವಕನಾಗಿದ್ದೆ. ನನ್ನ ಪತ್ರಿಕೆಯ ದೆಸೆಯಿಂದ ಬಹಳ ತೊಂದರೆಯಲ್ಲಿದ್ದೆ. ನನ್ನಲ್ಲಿ ಅಪ್ಯಾಯಿ ಹಣವಿರಲಿಲ್ಲ. ಪತ್ರಿಕೆಗಾಗಿ ಸಾವಿರಾರು ರೂಪಾಯಿಗಳು ತಿಂಗಳಿಗೆ ನಷ್ಟವಾಗುತ್ತಿತ್ತು. ಅಂತಹ ಸಮಯದಲ್ಲಿ ನನಗೆ ಸಹಾಯಮಾಡಿ ನಾನು ಅವರ ಕೃತಜ್ಞತೆಗೆ ಪಾತ್ರನಾಗುವಂತೆ ಮಾಡಿಕೊಳ್ಳಲು ನನಗೆ ಎಷ್ಟೊ ಸಾರಿ ಹೇಳಿಕಳುಹಿಸಿದರು. ನಾನು ಹೋಗಿ ಅವರನ್ನು ನೋಡಲೇ ಇಲ್ಲ. ಏಕೆಂದರೆ ನನ್ನ ಬಡತನದಲ್ಲಿ ನಾನವರ ಬಲೆಗೆ ಬಿದ್ದೇನೆಂಬ ಭಯವಿತ್ತು. ಮುಖ್ಯವಾಗಿ ದೇಶದ ಪ್ರಗತಿ ಸಾಧಿಸುವುದಕ್ಕೆ ಮತ್ತು ರಾಜ್ಯದ ಸೌಂದರ್ಯವನ್ನು ಹೆಚ್ಚಿಸುವುದಕ್ಕೆ ಅವರೇ ಕಾರಣಕರ್ತರು ಎಂಬುದಾಗಿ ಕೀರ್ತಿಗಳಿಸಿದ್ದಾರೆ. ವಿಶ್ವೇಶ್ವರಯ್ಯ ನಾಲಾ ಸಂಬಂಧವಾಗಿ ಪ್ರಕಟವಾದ ಸರ್ಕಾರೀ ಆರ್ಡರಿನಿಂದ ರೈತರಿಗಾಗಬಹುದಾದ ಕಷ್ಟನಷ್ಟಗಳನ್ನು ಅರಿಕೆ ಮಾಡಿಕೊಳ್ಳಲು ನಾಲ್ಕು ಸಾವಿರ ಜನ ರೈತರನ್ನು ನಾನು ಕರೆದುಕೊಂಡು ಕಾಲ್ನಡಗೆಯಲ್ಲಿ ಪ್ರಯಾಣಮಾಡಿ ಬೆಂಗಳೂರಿಗೆ ಬರುತಿರುವಾಗ ತಮ್ಮ ಅಹವಾಲನ್ನು ಹೇಳಿಕೊಳ್ಳಲು ರೈತರು ನಡೆದುಕೊಂಡು ನನ್ನ ಮೇಲಿನ ಒಂದು ವಿಶ್ವಾಸದಿಂದ ಇಲ್ಲಿಗೆ ಬರುತ್ತಿದ್ದಾರೆ. ಅವರಿಗೆ ಎಲ್ಲವಿಧವಾದ ಸಹಾಯವನ್ನು ಕೊಡಬೇಕು, ಅವರನ್ನು ಅಡ್ಡಿಪಡಿಸಬೇಡಿ ಎಂಬುದಾಗಿ ಎಲ್ಲಾ ಸರ್ಕಾರೀ ಅಧಿಕಾರಿಗಳಿಗೂ ಆರ್ಡರ್ ಮಾಡಿದರು. ನಾವುಗಳು ಇಲ್ಲಿಗೆ ಬಂದ ಮೇಲೆ ನನ್ನನ್ನು ಕರೆಸಿ, ನಿಮ್ಮ ಪೈಕಿ ನುಮಾರು ಏಳೆಂಟು ಜನ ಮುಖಂಡರು ಬಂದು ನನ್ನಲ್ಲಿ ಮಾತನಾಡಬೇಕೆಂದು ಹೇಳಿದರು. ಆಗ ನಾನು ''ಮುಖಂಡರೆಂದರೆ ನಿಮ್ಮಿಂದ ಓಟುಪಡೆದ

ವರು. ಅವರು ನಮ್ಮ ಕೈಬಿಟ್ಟಿದ್ದಾರೆ. ಈಗ ನಮಗೆ ಮುಖಂಡರಿಲ್ಲ'' ಎಂದು ಹೇಳಿದೆ. ಅದಕ್ಕೆ ಅವರು ನು ಮಾರು ನಾಲ್ಕು ಸಾವಿರಜನ ರೈತರು ನನ್ನ ಚೇಂಬರ್ನಿ ನೊಳಗೆ ಪ್ರವೇಶಿಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಎಂಬುದಾಗಿ ಕೇಳಿದರು. ಆಗ ನಾನು ಅವರೆಲ್ಲರೂ ಇರುವಸ್ಥಳಕ್ಕೆ ತಾವೇ ಬರಬಹುದಲ್ಲ ಎಂದೆ. ಅದನ್ನು ಕೇಳಿದಕೂಡಲೆ ''That is very nice'' ಎಂದುಹೇಳಿ ಸೆಕ್ರೇಟೆರಿಯಟ್ ಮೈದಾನದಲ್ಲಿ ಸರ್ಕಾರಕ್ಕೆ ಸರ್ಕಾ ರವೇ ಬಂದು ನಿಧಾನವಾಗಿ ಸುಮಾರು ಮೂರುನಾಲ್ಕು ಘಂಟೆಗಳ ಕಾಲ ರೈತರ ಅಹವಾಲನ್ನು ಕೇಳಿ ನ್ಯಾಯ ವಾದ ರೀತಿಯಲ್ಲಿ ಎಲ್ಲವನ್ನೂ ತೀರ್ಮಾನ ಮಾಡುವು ದಾಗಿ ಭರವಸೆಯಿತ್ತರು. ರೈತರು ಹೇಳಿರುವ ಅಹವಾ ಲನಲ್ಲಿ ನಿಜಾಂಶವಿದ್ದರೆ, ಅದನ್ನು ಬಹಳ ಲಕ್ಷ್ಯದಿಂದ ನೋಡುತ್ತೇನೆಂಬುದಾಗಿ ಹೇಳಿದರು. ರೈತರಿಗೆ ಇದ ರಿಂದಾಗಿ ಲಕ್ಷಾಂತರರೂಪಾಯಿಗಳ ಮಿಗುವಳಿಯಾಗು ವರೀತಿಯಲ್ಲಿ ಏರ್ಪಾಡುಮಾಡಿದರು. ಇಪ್ಪೊತ್ತು ಮಂಡ್ಯ ಜಿಲ್ಲೆಯಲ್ಲಿ ಅವರು ಮಾಡಿರುವ ಮಹದುಪಕಾರವನ್ನು ಎಲ್ಲರೂ ಸ್ಮರಿಸಿಕೊಳ್ಳಬೇಕಾಗಿದೆ. ಅತ್ಯಂತ ಕೃತಜ್ಞ ತೆಯನ್ನು ಅವರಿಗೆ ಸಲ್ಲಿಸಬೇಕಾಗಿದೆ. ಬೆಂಗಾಡಾ ಗಿದ್ದ ಮಂಡ್ಯಜಿಲ್ಲೆಯನ್ನು ನಂದನವನವನ್ನಾಗಿ ಮಾಡಿ ದ್ದಾರೆ. ಡಾ॥ ಸರ್ ಎಂ. ವಿಶ್ವೇಶ್ವರಯ್ಯನವರು ಪ್ರಾರಂಭಿಸಿದುದನ್ನು ಇವರು ಅನೇಕ ರೀತಿಯಲ್ಲಿ ವೃದ್ಧಿಪಡಿಸಿದರು. ನನ್ನ ಸ್ನೇಹಿತರು ಹೇಳಿದ ಹಾಗೆ ಅನೇಕ ಸಾರಿ ಚೀಫ್ ಇಂಜನಿಯರನ್ನು ಕಾರಿನಲ್ಲಿ ಕೂರಿಸಿಕೊಡು ಟೂರ್ ಹೋದಾಗ ರಸ್ತೆಗಳಲ್ಲಿ ಎಲ್ಲೆ ಮರ ಡೊಂಕಾಗಿದೆಯೋ ಅವುಗಳನ್ನೆಲ್ಲಾ ಕಡಿದು ನೆಟ್ಟಗಿರುವ ಮರಗಳನ್ನು ರಸ್ತೆಗಳಲ್ಲಿ ಹಾಕುವಂತೆ ವ್ಯವಸ್ಥೆ ಮಾಡುತ್ತಿದ್ದರು. ಎಲ್ಲಿ ನೋಡಿದರೂ ರಾಷ್ಟ್ರದ ಅಭಿವೃದ್ಧಿಸೂಚನೆಯೇ ಕಾಣಬೇಕೆಂಬುದು ಅವರ ಆಶಯವಾಗಿತ್ತು. ಅವರ ರಾಜ್ಯಾಡಳಿತದಲ್ಲಿ ಮಂಡ್ಯದ ಜನಗಳಿಗಂತೂ ಮಹದುಪಕಾರವನ್ನು ಮಾಡಿದ್ದಾರೆ. ಒಂದು ಸಾರಿ ಮಂಡ್ಯದ ಸಕ್ಕರೆ ಕಾರ್ಖಾನೆ ಒಂದು ದಿನಕ್ಕೆ 40 ಟಕ್ ಅರೆಯುವಷ್ಟಿದ್ದರೆ ಸಾಕು ಎಂದು ಅಭಿಪ್ರಾಯಪಟ್ಟಿದ್ದರು. ಆಗ ವ್ಯವಸಾಯದ ಇಲಾಖೆಯ ಡೈರೆಕ್ಟರ್ ಆಗಿದ್ದ ಶ್ರೀಮಾನ್ ಕೋಲ್ಮನ್ ಅವರು ದಿನಕ್ಕೆ 400 ಟಕ್ಗಳಷ್ಟು ಅರೆಯುವಷ್ಟಾದರೂ ಇರಬೇಕೆಂಬುದಾಗಿ ಸಲಹೆ ಮಾಡಿದರು. ಇಪ್ಪೊತ್ತು ಆ ಕಾರ್ಖಾನೆಯಲ್ಲಿ ದಿನಕ್ಕೆ ಎರಡು ಸಾವಿರ ಟಕ್ಗಳಷ್ಟು ಅರೆಯುವ ಶಕ್ತಿ ಇದೆ. ಇನ್ನುಮುಂದೆ ನಾಲ್ಕು ಸಾವಿರ ಟಕ್ಗಳಷ್ಟು ಕಬ್ಬನ್ನು ಅರೆಯುವಷ್ಟು ಮಾಡಬೇಕೆಂದು ಏರ್ಪಾಡು ಮಾಡುತ್ತಿದ್ದಾರೆ. ಮಂಡ್ಯ ಜಿಲ್ಲೆ ಬೆಂಗಾ ಡಾಗಿದ್ದಾಗ ನೋಡಿದ್ದಕ್ಕೂ ಇಪ್ಪೊತ್ತು ಆ ಜಿಲ್ಲೆಯನ್ನು ನೋಡುವುದಕ್ಕೂ ಎಷ್ಟೋ ವ್ಯತ್ಯಾಸವಿದೆ. ಅಲ್ಲಿ ರೈತರು ಎಷ್ಟೋ ನೆಮ್ಮದಿಯಿಂದಿದ್ದಾರೆ. ಇದಕ್ಕೆ ಬಹುಮಟ್ಟಿಗೆ ಮಿರ್ಜಾಸಾಹೇಬರೇ ಕಾರಣ ಕರ್ತರಾ ಗಿದ್ದಾರೆಂದು ಕೃತಜ್ಞತಾಪೂರ್ವಕವಾಗಿ ಸ್ಮರಿಸಿ ಕೊಳ್ಳುತ್ತೇನೆ. ನಾನು ಮಂತ್ರಿಯಾಗುವುದಕ್ಕೆ ಮುಂಚೆ ಒಂದು ಸಾರಿ ಅವರನ್ನು ಭೇಟಿಮಾಡಿದಾಗ ''Do you fight me even now?'' ಎಂದು ನಗುತ್ತಾ ಕೇಳಿದರು. ಮಂಡ್ಯಜಿಲ್ಲೆಯ ಪರವಾಗಿ ''I am very grateful to you'' ಎಂದು ಹೇಳಿದೆ. ಅವರು ಮುಖ್ಯವಾಗಿ ನಮ್ಮ ಜಿಲ್ಲೆಗೆ ಮಹದುಪಕಾರ ಮಾಡಿ ಮಂಡ್ಯ ರೈತಬಾಂಧವರ ವಿಶ್ವಾ ಸಕ್ಕೆ ಪಾತ್ರರಾಗಿ ಹೆಚ್ಚಿನ ಕೀರ್ತಿಯನ್ನು ಗಳಿಸಿದ್ದಾರೆ. ಸರ್ ಮಿರ್ಜಾಅವರು ಬಹಳ ದಕ್ಷತೆಯಿಂದ ಆಡಳಿತ ನಡೆ ಸಿದ್ದಾರೆ. ದೇಶಕ್ಕೆ ದೊಡ್ಡ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ವಿರೋಧಿಗಳಿಂದಲೂ ಕೂಡ ಪ್ರೀತಿ ವಿಶ್ವಾಸ ಗಳನ್ನುಗಳಿಸುವಂಥ ಮಾರ್ಗಗಳನ್ನು ಅವರು ಹಾಕಿ ಕೊಂಡಿದ್ದರು. ಮಹಾತ್ಮಗಾಂಧೀಜಿಯವರಿಗೆ ಅವರು ಅಚ್ಚು ಮೆಚ್ಚಿನ ಮಿತ್ರರಾಗಿದ್ದರು. ಅವರು ಗಾಂಧೀ ಜಿಯವರಿಗೆ ಕಾಗದಪತ್ರಗಳನ್ನು ಬರೆಯುತ್ತಿದಾ ಗಲೂ ಮತ್ತು ಅವರೊಂದಿಗೆ ಮಾತುಕತೆಗಳನ್ನಾಡು ತ್ತಿದ್ದಾಗಲೂ 'ಬಾಪೂಜಿ' ಎಂದೇ ಹೇಳುತ್ತಿದ್ದರು. ಗಾಂಧೀಜಿಯವರು ಒಂದೆರಡಾವರ್ತಿ ಮೈಸೂರಿಗೆ ಬಂದಿದ್ದಾಗೆಲ್ಲ ಸರ್ ಮಿರ್ಜಾ ಅವರು ಅವರಿಗೆ ಅಚ್ಚು ಮೆಚ್ಚಿನ ಮಿತ್ರರಾಗಿ ನಡೆದುಕೊಂಡಿದ್ದಾರೆ. ಮಹಾತ್ಮಗಾಂಧೀಜಿಯವರೊಮ್ಮೆ ಮದ್ರಾಸಿಗೆ ದಕ್ಷಿಣ ಭಾರತ ಹಿಂದೀ ಸಮ್ಮೇಳನಕ್ಕೆ ದಯಮಾಡಿಸಿದ್ದಾಗ ಅಲ್ಲಿಗೆ ನಮ್ಮ ಮೈಸೂರಿನಿಂದ ಹೋಗಿದ್ದಂಥ ಶ್ರೀ ಎಚ್. ಸಿ. ದಾಸಪ್ಪನವರೂ ನಾನೂ ಮತ್ತೊಬ್ಬರು ಬಹುಶಃ ಶ್ರೀ ಟಿ. ನುಬ್ರಮಣ್ಯರಿರಬಹುದು—ಇವರು ಗಾಂಧೀಜಿಯವರನ್ನು ಕಂಡು ತಾವು ಮೈಸೂರಿಗೆ ಇಷ್ಟು ಸಮೀಪಕ್ಕೆ ಬಂದಿದ್ದೀರಿ, ಮೈಸೂರಿಗೂ ಸಹ ತಾವು ದಯಮಾಡಿಸಬೇಕೆಂದು ಕೇಳಿದ್ದಕ್ಕೆ ''if you make Sir Mirza Dewan of your State again I am going to come to Mysore'' ಎಂದು ನಗುತ್ತಾ ಹೇಳಿದ್ದರು. ಎಂದರೆ ಮಹಾತ್ಮಾ ಜೀಯವರೂ ಸಹ ಸರ್ ಮಿರ್ಜಾ ಅವರ ವಿಚಾರದಲ್ಲಿ ಅಷ್ಟೊಂದು ಅಚ್ಚು ಮೆಚ್ಚಿನ ಪ್ರೀತಿ ವಿಶ್ವಾಸಗಳನ್ನಿಟ್ಟು ಕೊಂಡಿದ್ದರೆಂಬುದಕ್ಕಾಗಿ ಈ ವಿಚಾರ ಹೇಳಬೇಕಾ ಯಿತು. ಒಟ್ಟಿನಲ್ಲಿ ಅವರು ಮೈಸೂರಿಗೆ ಮಹದು ಪಕಾರ ಮಾಡಿ ದೊಡ್ಡ ಹೆಸರನ್ನು ಗಳಿಸಿದ್ದಾರೆ. ಅದ ರಲ್ಲೂ ಮಂಡ್ಯ ಜಿಲ್ಲೆಗೆ ಬಹಳ ಉಪಕಾರಮಾಡಿದ್ದಾರೆ, ನೂರು ವರ್ಷ ವಯಸ್ಸಿನವರು ನಮ್ಮ ಮಧ್ಯೆ ಇರು ವಾಗ ಎಪ್ಪತ್ತೆೈದು ವರ್ಷ ವಯಸ್ಸಿನಲ್ಲಿ ಇಂಥ ಮೇಧಾವಿಗಳು ಕಣ್ಮರೆಯಾದುದು ನಿಜವಾಗಿಯೂ ಬಹಳ ಸಂತಾಪವನ್ನುಂಟುಮಾಡತಕ್ಕದಾಗಿದೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ಕೋರಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ಪೀಮ್, ಈಗ ನಮ್ಮ ಸಭಾನಾಯಕರು ಸಭೆಯ ಮುಂದೆ ತಂದಿರತಕ್ಕ ಸಂತಾಪ ಸೂಚನೆಯ ಬಗ್ಗೆ ನಾನೂ ಕೂಡ ಭಾಗವಹಿಸಿ ಸರ್ಮಿರ್ಜಾ ಮಹಮ್ಮದ್ ಇಸಾಯಿಲ್ ಅವರ ಬಗ್ಗೆ ಒಂದೆರಡು ಮಾತುಗಳನ್ನಾಡ ಬೇಕೆಂದು ನಿಂತಿದ್ದೇನೆ. ಆದರೆ ಈಗಾಗಲೇ ಮಾತ ನಾಡಿದಂಥ ನನ್ನ ಮಾನ್ಯ ಮಿತ್ರರಾದ ಶ್ರೀ ಜೆ. ಬಿ. ಮಲ್ಲಾರಾಧ್ಯರೂ ಮತ್ತು ಶ್ರೀ ಕೆ. ಹುಮಂತಯ್ಯ ನವರೂ ಸರ್ ಮಿರ್ಜಾರವರ ಬಗ್ಗೆ ಏನೇನು ವಿಚಾರ ಗಳನ್ನು ಹೇಳಬೇಕಾಗಿತ್ತೋ ಅಷ್ಟೆಲ್ಲವನ್ನೂ ಇವರು ಗಳು ಹೇಳಿರುತ್ತಾರೆ. ಹಾಗೆ ಈ ಈರ್ವರು ಮಹನೀ ಯರು ಹೇಳಿರತಕ್ಕ ಅಭಿಪ್ರಾಯಗಳಿಗೆಲ್ಲ ನನ್ನ ಅನು ಮೋದನೆಯನ್ನು ಕೊಡುತ್ತ ಸರ್ ಮಿರ್ಜಾರವರು ಮೈಸೂರು ದೇಶದಲ್ಲಿ ನಮ್ಮ ರಾಜಮನೆತನದವ ರಿಂದ ಅಷ್ಟೊಂದು ಅಭಿಮಾನ ಪಡೆಯಲು ಕಾರಣವೇನು ಎಂಬ ವಿಚಾರವನ್ನು ಪ್ರಸ್ತಾಪಿಸುತ್ತ ಇವರು ನಮ್ಮ ದೇಶದಲ್ಲಿ ಅಂಥ ದೊಡ್ಡ ಕೆಲಸಕಾರ್ಯಗಳನ್ನು ಸಾಧಿ ಸಿದುದರಿಂದ ಸರ್ ಮಿರ್ಜಾ ಅವರಿಗೆ ರಾಜಮನೆತನ ದವರಿಂದ ಅಂಥ ಒಂದು ಅಭಿಮಾನ ಪಡೆಯಲು ಸಾಧ್ಯ ವಾಯಿತೆಂದು ಹೇಳಿದ್ದಾರೆ. ಆದರೆ ಅಷ್ಟೇಅಲ್ಲ. ಸರ್ ಮಿರ್ಜಾಅವರು ನಮ್ಮ ಮೈಸೂರಿನ ದಿವಾನರಾ ಗುವುದಕ್ಕೂ ಮುಂಚೆಯೇ ಅವರ ಮನೆತನದವರು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲೇ ಬಹಳ ಆಪ್ತ ಪರಿಚಯಸ್ಥರಾಗಿದ್ದರೆಂದು ಕೇಳು ತ್ತೇನೆ. ಆದರೆ ನಾನು ಸರ್ ಮಿರ್ಜಾ ಅವರಲ್ಲಗೆ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಎಂದೂ ಹೋಗಿದ್ದವನಲ್ಲ. ಇತ್ತೀಚೆಗೆ ಒಂದು ವರ್ಷದ ಹಿಂದೆ ನಾನು ನನ್ನ ಮಿತ್ರರಾದ ಅಶೋಕ ಮೆಹತಾರವರು ಸರ್ ಮಿರ್ಜಾ ಅವರನ್ನು ನೋಡಬೇಕಾಗಿತ್ತು. ಆಗ ಅವರು ನನ್ನನ್ನೂ ಸಹ ಅವರಲ್ಲಿಗೆ ಕರೆದುಕೊಂಡು ಹೋಗಿದ್ದರು. ಅಷ್ಟು ಹೊರತು ಅವರ ವಿಷಯ ನನಗೆ ಅಷ್ಟಾಗಿ ಹೆಚ್ಚಿಗೆ ಯೇನೂ ಗೊತ್ತಿರಲಿಲ್ಲ. ಅವರು ದೇಶದಲ್ಲಿ ಮಾಡಿರುವಂಥ ಕಾರ್ಯಗಳು ಎಲ್ಲರ ಕಣ್ಣಿಗೂ ಎದ್ದು ಕಾಣುತ್ತಿವೆ. ಸರ್ ಮಿರ್ಜಾ ಅವರ ತಾತನವರ ಹೆಸರು ಆಲ ಆಸ್ಕರ್ ಎಂದು. ಅವರೊಬ್ಬ ಭಾರಿ ಕುದುರೆ ವ್ಯಾಪಾರಿಗಳಾಗಿದ್ದು ಮೈಸೂರಿಗೆ ಬಂದ ನಂತರ ಅವರು ಆಗಿದ್ದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಪ್ತ ಸ್ನೇಹಿತರ ವರ್ಗದಲ್ಲಿ ಒಬ್ಬರಾಗಿ ಸೇರಿಕೊಂಡರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಆವರಿಗೆ ಬ್ರಿಟಿಷ್ ಆಡಳಿತವಿದ್ದಾಗ ಬಹಳ ತೊಂದರೆ ಬಂದು ಒದಗಿತ್ತು. ಅಂಥ ಕಷ್ಟ ಪರಿಸ್ಥಿತಿಯೊದಗಿದ್ದಾಗ ಆಲ ಆಸ್ಕರ್ ಅವರು ಸರ್ ಮಾರ್ಕ್ ಕಬ್ಬರ್ ರವರ ಬಳಿ ಹೋಗಿ ಆಗಿನ ರಾಜಮನೆತನಕ್ಕೆ ಬಹಳ ಸಹಾಯ ಮಾಡಿದ್ದರೆಂದು ನನಗೆ ಇತ್ತೀಚೆಗೆ ತಿಳಿಯಬಂತು. ಅದಕ್ಕಾಗಿ ಆಲ ಆಸ್ಕರ್ ಅವರ ಮಕ್ಕಳು ಎಂದರೆ ಆಗಾಹಾರ್‌ರವರನ್ನು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಮಕ್ಕಳಾದ ಶ್ರೀ ಚಾಮರಾಜ ಒಡೆಯರವರಿಗೆ ಎ. ಡಿ. ಸಿ. ಆಗಿ ನೇಮಕ ಮಾಡಿದ್ದರೆಂದೂ ತಿಳಿಯುತ್ತೇನೆ. ಅಷ್ಟೇ ಅಲ್ಲದೆ ಶ್ರೀಮತ್ ಚಾಮರಾಜ ಒಡೆಯರು ನಿಧನ ಹೊಂದಿದ ಅನಂತರವೂ ಕೂಡ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರಿಗೂ ಮತ್ತು ಮಹಾರಾಣಿ ಸಿ.ಎ. ಅವರಿಗೂ ಸರ್ ಮಿರ್ಜಾಅವರ ತಂದೆಯವರು ಅನೇಕ ಸಲಹೆಗಳನ್ನಿತ್ತು ಅವರಿಗೆ ಸಹಾಯಕರಾಗಿದ್ದರೆಂದು ತಿಳಿಯುತ್ತೇನೆ. ಇಂಥ ಒಂದು ವಿಶ್ವಾಸ ಸರ್ ಮಿರ್ಜಾ ರವರ ಫ್ಯಾಮಿಲಿಗೂ ಮತ್ತು ನಮ್ಮ ರಾಜ್ಯದ ರಾಯಲ್ ಫ್ಯಾಮಿಲಿಯವರಿಗೂ ಇದ್ದುದರಿಂದ ಸರ್ ಮಿರ್ಜಾಅವರು ಮೊದಲು ರಾಯಲ್ ಸ್ಕೂಲಿನಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರ ಸಹಪಾಠಿ (ಕಂಪ್ಯಾನಿಯನ್) ಆಗಿದ್ದು ಅನಂತರ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿದ ಅನಂತರ ಇವರಲ್ಲಿದ್ದ ಅಂಥ ಹಿಂದಿನ ಮನೆತನದ ವಿಶ್ವಾಸ, ಪ್ರೀತಿಯಿಂದಲೂ ಮತ್ತು ಇವರಲ್ಲಿದ್ದ ಮೇಧಾಶಕ್ತಿ, ಸೂಕ್ಷ್ಮಬುದ್ಧಿಯನ್ನು ನೋಡಿಯೂ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಇವರನ್ನು ತಮ್ಮ ರಾಜ್ಯದ ದಿವಾನ್ ಪದವಿಗೆ ತೆಗೆದು ಕೊಂಡರು. ಆದರೆ ಆಗಲೇ ಶ್ರೀ ಹನುಮಂತಯ್ಯ ನವರು ಹೇಳಿದಹಾಗೆ ಸರ್ ಮಿರ್ಜಾರವರು ಕಾಲ, ದೇಶ, ವರ್ತಮಾನಗಳಿಗೆ ಅನುಗುಣವಾಗಿ ಕಾರ್ಯ ನಡೆಸಿಕೊಂಡು ಹೋಗುತ್ತಿದ್ದರು. ಆಗ ಕಾಲವೂ ಅವರಿಗೆ ಹಾಗೆಯೇ ಬಹಳ ಅನುಕೂಲವಾಗಿತ್ತು. ಸರ್ ಮಿರ್ಜಾಅವರು ಈಗಿನಂಥ ಕಾಲದಲ್ಲೇನಾದರೂ ಇದ್ದಿದ್ದರೆ ಅವರಿಗೆ ಖಂಡಿತವಾಗಿಯೂ ಅಂಥ ಯಾವ ಕೆಲಸವನ್ನು ಮಾಡಲೂ ಸಾಧ್ಯವಾಗುತ್ತಿರಲಿಲ್ಲ. ಅವರು ಆಗಲೂ ಸಹ ತಮ್ಮ ಜಾಣ್ಮೆಯಲ್ಲಿ ಸ್ವಲ್ಪ ಮೈಮರೆತಿದ್ದರೆ ಬ್ರಿಟಿಷರೇ ಅವರನ್ನು ದಿನ ಮಧ್ಯಾಹ್ನದಲ್ಲಿ ಪದಚ್ಯುತರನ್ನಾಗಿ ಮಾಡಿಬಿಡುತ್ತಿದ್ದರು. ಆದರೆ ಆಗ ಅವರು ಅತ್ತ ಬ್ರಿಟಿಷರಿಗೂ ಇತ್ತ ತಮ್ಮ ದೇಶಕ್ಕೂ ಎರಡು ಕಡೆಗಳಲ್ಲೂ ವಿಶ್ವಾಸಗಳಿಸಿ ಬೆಳೆಸಿಕೊಂಡು ಬಂದುದರಿಂದ ನಮ್ಮ ರಾಜ್ಯದ ಅಭಿವೃದ್ಧಿ ಇಷ್ಟರ ಮಟ್ಟಿಗೆ ಆಗಲು ಅವಕಾಶವಾಯಿತು. ಸರ್ ಮಿರ್ಜಾ ಅವರು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟು ಕೆಲಸ ಮಾಡ ಬೇಕಾಗಿದ್ದರೂ ಸಹ ಅವರು ಆ ಕಾಲದಲ್ಲಿ ಸಾಧಿಸಿರುವಂಥ ಕಾರ್ಯಗಳೇನಿವೆ ಅವನ್ನು ಈ ದಿವಸ ಡೆಮಾಕ್ರೆಸಿ ಯಪದ್ಧತಿ ಆಡಳಿತವಿದ್ದರೂ ಮಾಡಲಕ್ಕೆ ಸಾಧ್ಯವಾಗುತ್ತಿಲ್ಲ. ಹಿಂದೆ ಸ್ವಾತಂತ್ರ್ಯ ಸಂಪಾದನೆಗಾಗಿ ದೇಶದಲ್ಲಿ ಹೋರಾಟ ನಡೆಯುತ್ತಿದ್ದಾಗ, ವಿದುರಾಶ್ವತ್ಥದಲ್ಲಿ ಗುಂಡಿನ ಪ್ರಕರಣ ನಡೆದಾಗ, ಅಲ್ಲಿ ನಡೆದಂಥ ಅಕೃತ್ಯ ಗಳೇನೆಂಬುದನ್ನು ತಿರ್ಮಾನಿಸಲು ಬ್ರಿಟಿಷರಿಗೆ ಹೆದರಿ ಕೊಳ್ಳದಂತೆ ಒಂದು ಸಮಿತಿಯನ್ನು ಇವರು ನೇಮಕ ಮಾಡಿದ್ದರು. ಆ ಸಮಿತಿಯ ತೀರ್ಮಾನಕ್ಕನುಗುಣವಾಗಿ ತಪ್ಪಿತಸ್ಥರೆಂದು ಯಾರ್ಯಾರೂ ಎಂದು ತಿಳಿಯಬಂದಿತೊ ಅಂಥವರಿಗೆಲ್ಲ ಕನಿಷ್ಠ ಪಕ್ಷ ಒಂದು ವರ್ಗಾವರ್ಗಿಯನ್ನಾದರೂ ಮಾಡಿ, ಆ ಮೂಲಕ ಜನರನ್ನು ತೃಪ್ತಿಪಡಿಸಿ ಜನರ ಮೆಚ್ಚಿಗೆಯನ್ನು ಪಡೆದರು. ಆಗ ದೇಶದಲ್ಲಿ ಡೆಮಾಕ್ರೆಸಿ ಪದ್ಧತಿಯ ಆಡಳಿತವೇ ಇದ್ದಿದ್ದರೆ ಹೇಗೆ ಜನರನ್ನು ತೃಪ್ತಿಪಡಿಸಬೇಕಿತ್ತೋ ಹಾಗೆ ಆಗಿನ ಆಡಳಿತವಿದ್ದಾಗಲೂ ಅವರು ತೃಪ್ತಿಕರವಾಗಿಯೇ ಆಡಳಿತ ನಡೆಸಿದ್ದಾರೆ.

3 P.M.

ಶ್ರೀ ವೀರಣ್ಣಗೌಡರು ಶಿವಪುರದ ಕಾಂಗ್ರೆಸ್ ಅಧಿವೇಶನವನ್ನು ಮಾಡಿದಾಗ್ಗೆ ಏನೋ ಮಹತ್ಕಾರ್ಯಗಳನ್ನು ಮಾಡುತ್ತಾರೆಂದು ನಾವೆಲ್ಲ ತಿಳಿದುಕೊಂಡಿದ್ದೆವು. ಆಗ ನಾನೂ ಸಹ ನಾರ್ಮಾಣಿಯ ಕಾಂಗ್ರೆಸ್ ಸದಸ್ಯನಾಗಿದ್ದೆ. ನನ್ನ ಸ್ವಂತ ಖರ್ಚಿನಲ್ಲಿ ಕುದಿಕೆ ಮಡಕೆಗಳನ್ನು ಜಾಸ್ತಿ ತಯಾರು ಮಾಡುತ್ತಾರೆ. ಶಿವಪುರದ ಕಾಂಗ್ರೆಸ್ ಅಧಿವೇಶನಕ್ಕೆ ಬೇಕಾಗಿದ್ದ ಕುದಿಕೆ, ಮಡಕೆಗಳನ್ನು ಗಾಡಿಗಳಲ್ಲಿ ತೆಗೆದುಕೊಂಡುಹೋಗಿ ಕೊಟ್ಟಿದ್ದೆನೆ. ಆಗ ಬಂದೂಕು ಹಿಡಿದ ಸಿಪಾಯಿಗಳು ಆ ಪ್ರಾಂತಕ್ಕೆ ವಿಶೇಷವಾಗಿ ಬಂದಿದ್ದರು. ಇವರುಗಳು ಏನು ಮಾಡುತ್ತಾರೆಯೋ ಏನೋ ಎಂದು ಭಾವಿಸಿದ್ದೆ. ಯಾರಾದರೂ ವಿರೋಧ ಪ್ರದರ್ಶನಗಳನ್ನು ಮಾಡಿದರೆ, ಈಗಿನ ಪ್ರಜಾಪ್ರಭುತ್ವದಲ್ಲಿಯಾಗಲಿ, ಅವರನ್ನು ದಸ್ತಗಿರಿಮಾಡಿ, ತೆಗೆದುಕೊಂಡುಹೋಗಿ ಜೈಲಿನಲ್ಲಿಟ್ಟು ಒಂದೆರಡು ದಿನವಾದಮೇಲೆ ಆಚೆ ಬಿಡುತ್ತಾರೆ. ಆಗಲೂ ಸಹ ಅದೇರೀತಿಯಾಗಿ ಮಾಡುತ್ತಿದರು. ಅವರ ವಿವೇಕ, ಅವರಿಗೆ ಪ್ರಜಾಪ್ರಭುತ್ವದಲ್ಲಿದ್ದ ನಂಬಿಕೆ, ಆಗಿನ ಕಾಲದಲ್ಲಿ ಅವರು ವರ್ತಿಸಿದ ರೀತಿ ನೀತಿ ಇವು ನಮಗೆ ಅನುಕರಣೀಯವಾಗಿವೆ. ಅಂಥ ವಿರೋಧಗಳೇ ನಾದರೂ ಬಂದಾಗ ನಾವೂ ಸಹ ಅವರು ವರ್ತಿಸುತ್ತಿದ್ದ ರೀತಿಯಲ್ಲಿ ವರ್ತಿಸಿದರೆ ಸಾಕು ಎಂದು ಅನ್ನಿಸುತ್ತದೆ.

ಸರ್ ಮಿರ್ಜಾ ಅವರು ಏನೇನು ಕೆಲಸಕಾರ್ಯಗಳನ್ನು ಮಾಡಿದ್ದಾರೆಂಬುದನ್ನು ಎಲ್ಲ ಮಾನ್ಯ ಮಿತ್ರರೂ ಹೇಳಿದರು. ಶ್ರೀ ವೀರಣ್ಣಗೌಡರು ಸಹ ಮಂಡ್ಯ ಜಿಲ್ಲೆಗೆ ಏನೇನು ಅನುಕೂಲಗಳನ್ನು ಮಾಡಿಕೊಟ್ಟಿದ್ದರೆಂದು ಹೇಳಿದರು. ಮಂಡ್ಯ ಜಿಲ್ಲೆಯು ಇವೊತ್ತಿನ ದಿವಸ ನಮ್ಮ ಮೈಸೂರು ದೇಶದ ಅಮೆರಿಕ ಎನ್ನುವ ರೀತಿಯಲ್ಲಿ ಮಾಡಿದರು. ಮಂಡ್ಯ ಜಿಲ್ಲೆಯಲ್ಲಿ ಬರಿಯ ದನಗಳನ್ನು ಚೆನ್ನಾಗಿ ಮೇಯಿಸಿ, ಅವುಗಳಿಂದ ಬಂದಂಥ ಉತ್ಪತ್ತಿಯಲ್ಲಿ ನಮ್ಮ ರೈತರು ಅವರ ಜೀವನವನ್ನು ನಡೆಸಿ ಬಾಳಬೇಕಾಗಿತ್ತು. ಅಂಥ ಒಂದು ಕ್ಷೇತ್ರಕ್ಕೆ ನೀರನ್ನು ಒದಗಿಸಿದ್ದು ಮಾತ್ರ ವಲ್ಲದೆ, ಅಲ್ಲಿನ ರೈತರಿಂದ ಕಂಟ್ರಿಬ್ಯೂಷನ್ ಸಹ ತೆಗೆದುಕೊಳ್ಳದಂತೆ ಮಾಡಿದರು. ಇದರಿಂದ ಅಲ್ಲಿ ಭತ್ತ, ಕಬ್ಬು ವಿಶೇಷವಾಗಿ ಬೆಳೆಯುವಂತೆ ಮಾಡಿದರ್ಲು ಅಲ್ಲದೆ ಮಂಡ್ಯದಲ್ಲಿ ಒಂದು ಸಕ್ಕರೆ ಕಂಪನಿಯನು ಸ್ಥಾಪನೆ ಮಾಡಿದ್ದರಿಂದ, ನಮ್ಮ ರೈತರು ಇವೊತ್ತು ಎಷ್ಟೋ ಸುಖವಾಗಿದ್ದಾರೆ. ಇದರ ಕೀರ್ತಿಯೆಲ್ಲಾ ಸರ್

ಮಿರ್ಜಾಅವರಿಗೆ ಸಲ್ಲತಕ್ಕದ್ದು. ಚನ್ನಪಟ್ಟಣದಲ್ಲಿ ಒಂದು ಸ್ಪಿನ್ನಿಂಗ್ ಫ್ಯಾಕ್ಟರಿಯನ್ನು ಪ್ರಾರಂಭಿಸಿದರು, ಇದೇರೀತಿ ಅನೇಕ ಊರುಗಳಲ್ಲಿ ಅನೇಕ ಕೆಲಸಗಳನ್ನು ಮಾಡಿದರು. ಇವೊತ್ತು ಶಿವಮೊಗ್ಗಾಕ್ಕೆ ಹೋದರೆ ಅಲ್ಲಿರುವ ಸರ್ಕಲ್ ಅಲ್ಲಿಗೆ ಕೊಟ್ಟಿರುವ ವಿದ್ಯುಚ್ಛಕ್ತಿ ಸೌಲಭ್ಯ ಇವನ್ನು ನಾವು ಕಾಣುತ್ತೇವೆ. ಹಳೆಯ ಮೈಸೂರಿನ ಯಾವ ಜಿಲ್ಲೆಯಲ್ಲಿಯೇ ಆಗಲಿ, ಯಾವ ಊರಿನಲ್ಲಿಯೇ ಆಗಲೀ ಇವರು ಮಾಡದೆ ಇರುವ ಕಾರ್ಯವಿಲ್ಲ. ರಸ್ತೆಯ ಪಕ್ಕಗಳಲ್ಲಿ ಪ್ರತಿಯೊಂದು ಊರಿನ ಬಳಿಯೂ ಕಟ್ಟಿರುವ ಪ್ರವೇಶದ್ವಾರ ಸರ್ಕಲ್ ಮೊದಲಾದವು ಯಾರ ಕಾಲದಲ್ಲಾಯಿತು ಎಂದರೆ ಸರ್ ಮಿರ್ಜಾ ಅವರ ಕಾಲದಲ್ಲಿ ಎಂದು ಹೇಳಬೇಕು. ಮತ್ತು ಯಾವುದಾದರೂ ಕಟ್ಟಡ, ಸರ್ಕಲ್ ಮಗ್ಗೆರೆ ನಿರ್ಮಾಣವಾದರೆ ಅವುಗಳು ಅಲಂಕಾರವಾಗಿರುವುದು ಮಾತ್ರವಲ್ಲದೆ ಜನಗಳಿಗೂ ಉಪಯೋಗವಾಗುವಂತೆ ಮಾಡುತ್ತಿದ್ದರು. ಬೆಂಗಳೂರಿನಲ್ಲಿ ಈಗ ಚಿಕ್ಕಲಾಜಿಕರ್ ಇನ್ ಸ್ಟಿಟ್ಯೂಟ್ ಬಳಿಯಿರುವ ಸರ್ಕಲ್‌ನಲ್ಲಿ ಹಿಂದೆ ಮೂರು ಕಡೆ ಮಾತ್ರ ಕಟ್ಟಡಗಳಿದ್ದು ಒಂದು ಕಡೆ ಹಾಗೆಯೇ ಖಾಲಿ ಜಾಗ ಇತ್ತು. ಈ ಸ್ಥಳವನ್ನು ಯಾವುದಾದರೂ ಒಳ್ಳೆಯ ಕೆಲಸಕ್ಕೆ ಅನುಕೂಲವಾಗುವಂತೆ ಮಾಡಬೇಕೆಂದು ಯೋಚಿಸಿ ದೇಶಕ್ಕೆ ಅನುಕೂಲವಾಗುವಂತೆ, ಆ ಸ್ಥಳಕ್ಕೆ ಈ ಊರಿಗೆ ಎಲ್ಲಕ್ಕೂ ಹೊಂದಿಕೊಳ್ಳುವಂತೆ ಒಂದು ಭವ್ಯ ಕಟ್ಟಡವನ್ನು ನಿರ್ಮಾಣ ಮಾಡಿದರು, ಇವುಗಳೆಲ್ಲವೂ ಸರ್ ಮಿರ್ಜಾ ಅವರ ಸ್ಮಾರಕಗಳಂತಿದ್ದು ಅವರನ್ನು ನೆನಪು ಮಾಡಿಕೊಡುತ್ತವೆ. ಈ ಸ್ಮಾರಕಗಳಿಂದ ನಾವು ಅವರನ್ನು ಮರೆಯುವಂಥ ಸ್ಥಿತಿಯಲ್ಲಿಲ್ಲ. ನಾವು ದೇಶದ ಯಾವ ಮೂಲೆಗೆ ಹೋದರೂ ಸಹ ಅವರನ್ನು ಮರೆಯುವುದಕ್ಕೆ ಸಾಧ್ಯವಿಲ್ಲದಂಥ ಸ್ಮಾರಕಗಳನ್ನು ನಿರ್ಮಿಸಿ ಹೋಗಿದ್ದಾರೆ. ಅಂಥ ಒಬ್ಬ ಮಹನೀಯರನ್ನು ಈ ದಿವಸ ನಾವು ಕಳೆದುಕೊಂಡಿರುವುದು ನಮ್ಮ ದುರ್ದೈವ. ಅವರ ಮಹನೀಯರ ಕಾರ್ಯಗಳನ್ನು ಏನೇನನ್ನು ನಾವು ನೋಡುತ್ತಿದ್ದೇವೆ. ಅವುಗಳನ್ನೆಲ್ಲವನ್ನು ನೆನಪಿಸಿ ನಾವು ಮುಂದೆ ನಮ್ಮ ದೇಶಕ್ಕೆ ಒಳ್ಳೆಯದಾಗುವಂತೆ ಮಾಡಬೇಕು. ಈ ವಿಧಾನ ಸೌಧದ ಕಟ್ಟಡದ ಕೆಲಸವು ನಡೆಯುತ್ತಿದ್ದಾಗಲೂ ಸಹ ಸರ್ ಮಿರ್ಜಾ ಅವರು ನಮ್ಮ ಸಲಹೆಗಳನ್ನು ಕೊಟ್ಟಿದ್ದಾರೆಂದು ಜನರು ಹೇಳುವುದನ್ನು ನಾನು ಕೇಳಿದ್ದೇನೆ, ಆ ವಿಚಾರ ನನಗೆ ಸರಿಯಾಗಿ ಗೊತ್ತಿಲ್ಲದೆ ಇರುವುದರಿಂದ ಅದನ್ನು ನಮರ್ಥಿಸಿ ಹೇಳುವುದಕ್ಕೆ ನನಗೆ ಸಾಧ್ಯವಿಲ್ಲ. ದಯಾಮಯನಾದ ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನಿತ್ತು ಅವರಿಗೆ ಸ್ವರ್ಗವನ್ನು ಕರುಣಿಸಲಿ ಎಂದು ಹೇಳಿ ಮಾನ್ಯ ಸಭಾನಾಯಕರ ಸೂಚನೆಯನ್ನು ಅನುಮೋದಿಸುತ್ತೇನೆ.

Sri M. C. NARASIMHAN.—I shall not be very long in my speech. I associate myself with the sentiments expressed by the Leader of the House and other Hon'ble Members. A small error appears to have crept into the written statement read out by the Chief Minister. It is said that Sir Mirza graduated from the Madras University. Unfortunately, it is incorrect. He was a student of the Central College to which I also belong.

Sri T. SUBRAMANYA (Minister for Law and Labour).—No, no, it is Madras University.

Sri K. HANUMANTHAIYA.—The Chief Minister is right. Because in those days the Central College was affiliated to the Madras University.

Sri M. C. NARASIMHAN.—He was a student of the Central College and he passed out in 1905. I once again associate myself with the sentiments of condolence expressed and the achievements of Sir Mirza that have already been at dealt with at great length.

[**Sri B. SHAM SUNDER** (Bhalki) spoke in Urdu.]

[**Sri L. B. BIRJE** (Khanapur) spoke in Marathi.]

ಶ್ರೀ ಎಚ್. ಜಿ. ನರಸಿಂಹೇ ಗೌಡ.-Closure move ಮಾಡುತ್ತೇನೆ, Sir.

Mr. SPEAKER.—No closure motion. It is not fair. Sri Doddameti.

*ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ಇಲ್ಲಿ ತಾವುಗಳೆಲ್ಲಾ ಸರ್ ಮಿರ್ಜಾರವರ ಸಂತಾಪ ಸೂಚನೆಯಲ್ಲಿ ಭಾಗವಹಿಸಿದ್ದರಲ್ಲಿ ನಾನು ನನ್ನ ಅನುಮೋದನೆ ವ್ಯಕ್ತಮಾಡಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಮಾಡುತ್ತೇನೆ. ಉದಾರ ಮತವಾದಿಗಳಾದ ಸರ್ ಮಿರ್ಜಾ ಅವರು ನಪ್ರೂ, ಜಯಕರ್ ಪಂಕ್ತಿಗೆ ಸೇರಿದ ಒಬ್ಬ ದೇಶನಿಷ್ಠರು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಅವರನ್ನು ನಾನು ಕೇವಲ ಒಂದೇ ಒಂದು ಸಲ ಭೇಟಿಯಾಗುವ ಸುಯೋಗ ಲಭಿಸಿತ್ತು. ಅದು ಹುಬ್ಬಳ್ಳಿಯ ಸ್ವೀಪಿನ್ನಿನ ವೇಟಿಂಗ್ ರೂಮಿನಲ್ಲಿ. ಕರ್ಣಾಟಕ ರಚನೆ ಆಗಬೇಕೋ ಬೇಡವೋ ಎಂಬ ಒಂದು ಪ್ರಸಂಗದಲ್ಲಿ, ಅವರನ್ನು ಕರ್ಣಾಟಕ ಏಕೀಕರಣ ಸಮಿತಿಯ ಕಾರ್ಯದರ್ಶಿ ಎಂದು ನಾನು ಅವರ ಭೇಟಿ ಪಡೆದುಕೊಂಡಿದ್ದ ಆ ಹೊತ್ತಿನಲ್ಲಿ ಅವರೊಡನೆ ನಡೆದ ಮಾತುಗಳನ್ನು ನಾನು ಇಲ್ಲಿ ಸ್ಮರಿಸುತ್ತಾ ಇದ್ದೇನೆ. ಅವರು ಎಷ್ಟು ತೂಕಮಾಡಿ ಮಾತನಾಡುತ್ತಿದ್ದರು ಎಂದು ಆ ಮಾತಿನಿಂದ ತಾವು ಅರ್ಥಮಾಡಿಕೊಳ್ಳಬಹುದು. ಏನು ಸ್ವಾಮಿ, ಕರ್ಣಾಟಕವಾಗುವ ಬಗ್ಗೆ ತಮ್ಮ ಸಂಪೂರ್ಣ ಬೆಂಬಲ ಮತ್ತು ಆಶೀರ್ವಾದ ಇರಬೇಕು ಎಂದು ಅವರನ್ನು ಕೋರಿದ ಹೊತ್ತಿನೊಳಗೆ ಅವರು ಹೇಳಿದಮಾತು ಇದು. ''ನನ್ನ ಆಶೀರ್ವಾದ, ಮತ್ತು ನನ್ನ ಒಪ್ಪಿಗೆಯ ಮೇರೆ ಅದು ಪ್ರತಿಪಾದಿಸುವ ಮಾತಲ್ಲ. ನಾನು ಅಪೇಕ್ಷಿಸಲಿ, ಅಪೇಕ್ಷಿಸದೆ ಇರಲಿ ಕರ್ಣಾಟಕವಾಗುವ ಕಾಲ ಸನ್ನಿಹಿತವಾಗುತ್ತಿದೆ. ಆ ಕಾಲದಲ್ಲಿ ನಿಮಗೆ ಜಯ ಕೊಡಲಿ''. ಎಂದು ಹೇಳಿದರು. ಇದರಲ್ಲಿ ತಮ್ಮ ಅಭಿಪ್ರಾಯವನ್ನು ಯಾವುದೇ ರೀತಿಯಾದ ತಮ್ಮ ಕಮಿಟ್‌ಮೆಂಟ್ ಇಲ್ಲದೆ ಹೇಳಿದ್ದರೂ, ಅವರ ದೂರದೃಷ್ಟಿ ಮತ್ತು ಅವರು ಮುಂದಿನ ಭವಿಷ್ಯವನ್ನು ನಿರ್ಧಾರ ಮಾಡಬಲ್ಲಂಥ ಸಾಮರ್ಥ್ಯ ಅವರಲ್ಲಿದೆ ಎಂದು ನಮಗೆ ಕಂಡುಬಂದಿದೆ. ಇದೇ ರೀತಿಯಾಗಿ ನಾನು ಪ್ರಸಿದ್ಧ ಪಡಿಸಬಹುದೋ ಎಂದು ಕೇಳಿದಾಗ, ಪ್ರಸಿದ್ಧ ಪಡಿಸುವ ಗೊಡವೆಗೆ ಹೋಗಬೇಡಿ ಎಂದು ಅವರು ಹೇಳಿದರು. ಕರ್ಣಾಟಕದ ಬಗ್ಗೆ ಅವರು ಒಂದು ಬಗೆಯ ಪ್ರಗತಿಶೀಲ ಮನೋವೃತ್ತಿ, ತೋರಿ ನಮ್ಮನ್ನೆಲ್ಲಾ ಆಗ

(ಶ್ರೀ ಎ. ಜೆ. ದೊಡ್ಡಮೇಟಿ)

ಪ್ರೋತ್ಸಾಹಿಸಿದುದಕ್ಕಾಗಿ ನಾನು ಬಹಳ ಸಂತೋಷಭರಿತನಾಗಿ ಬೀಳ್ಕೊಟ್ಟೆ. ಅವರ ಮೋಹಕ ವಾದಂಥ ಸಂದೇಶ ನಮಗೆ ಕರ್ಣಾಟಕದ ಕಾರ್ಯದಲ್ಲಿ ಒಂದು ರೀತಿಯಾದ ಹುರಪನ್ನು ತಂದಿತು. ಇಷ್ಟು ಮಾತ್ರ ಹೇಳುತ್ತೇನೆ: ಅಂಥ ಮೇಧಾವಿಗಳು, ಸಮನ್ಯಯ ಬುದ್ಧಿಯುಳ್ಳವರು ಅವರು ಇಂದು ಕರ್ಣಾಟಕ ಮತ್ತು ಭಾರತ ದೇಶ ತನ್ನ ಸುಪುತ್ರನನ್ನು ನಾಡು ಕಳೆದುಕೊಂಡಿದೆ.

Sri F. M. CORBETT (Nominated).—Mr. Speaker, Sir, I rise to associate myself with the very many well deserved eulogies paid to the memory of a great man by speakers of all shades of opinion in this House I belong to a minority community, a very small minority, *viz.*, Christians and that is why I asked for the privilege of being permitted to associate myself with the great homage that is being paid to a great man today.

Many members spoke of eminent Hindu Dewans serving Muslim States and of Muslim Dewans serving Hindu States. I will not be able to speak with authority of all the good work done by Sir Mirza Ismail in Mysore. But his life and work epitomise the essential unity of India. Some member said that the work of good men lives after them. I say, Sir, that the work of this great man lives among us here today. In this very hall we have Hindus, Muslims and Christians serving the country sitting in the treasury benches, in the ruling party and in the Opposition. All over the Secretariat and in every department there are several eminent Muslim gentlemen serving the interests of our country. I do not speak of the Mysore State or Hyderabad State or of any other State where Sir Mirza Ismail rendered service but I speak for the whole of India and I think Sir Mirza Ismail's memory will live with us for ever. Some people have spoken about a monument for him. But the State is full of monuments in the very many works of public utility which he has given to the State which have been referred to by the previous speakers. If we are to erect a monument to Sir Mirza Ismail it will naturally be of brick and mortar but in that monument let us enshrine his soul and spirit of service and may we all decide to work together in the spirit and self-sacrifice with which Sir Mirza served this country.

With these words, I heartily associate myself with the very sentiments expressed by the other speakers and I thank you for giving me this opportunity to speak on behalf of the Christian community.

Mr. SPEAKER.—I fully associate myself with the sentiments expressed by all the members who have taken part in this House. In fact the whole State has lost in Sir Mirza Ismail a great administrator, a man of genius and a man whose thought were high and who executed his ideas. We have lost in him a man whose like we may not meet many many years after to come.

I now request the members to rise in their seats.

(*Hon'ble Members rose in their seats and observed silence for two minutes.*)

Mr. SPEAKER.—Hon'ble Members may resume their seats. The condolences of this House will be conveyed to the bereaved family.

Mr. SPEAKER.—Before we rise I would like to announce one thing. Today is a day of observance of National Savings. Members are requested to purchase National Savings Certificates sold outside the Chamber. I request all the members to contribute to National Savings campaign as much as they can. The Ministers and others also will take part in this campaign and I have also decided to contribute my mite a certain amount monthly. Hon'ble Members will not think in any way that it is a routine thing. It is a thing that we have to do and I hope they will not fail.

The House will now rise and meet tomorrow at 1 P.M.

The House adjourned at Thirty Minutes past Three of the Clock to meet again at One of the Clock on Tuesday, the 3rd March 1959.

WD 2793—GPB—900—30-5-59